ಕರ್ನಾಟಕ ಸರ್ಕಾರ

## ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ

Law and Administrative Department

# ವಾರ್ಷಿಕ

Annual

# ವರದಿ

Report

## ೧೯೯೪-೯೫

1994-95

## ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಯ

## ವಾರ್ಷಿಕ ವರದಿ 1994-95

ಪೀಠಿಕೆ:

ಕರ್ನಾಟಕ ಸರ್ಕಾರದ ಸಚಿವಾಲಯದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಯಲ್ಲಿ ಕೆಳಕಂಡ ಏಳು ಶಾಖೆಗಳಿವೆ:

1. ಆಡಳಿತ ಶಾಖೆ,
2. ವ್ಯಾಜ್ಯ ವ್ಯವಹಾರಗಳ ಶಾಖೆ,
3. ಪ್ರಾರೂಪಣಾ ಶಾಖೆ,
4. ಪ್ರಾರೂಪಣಾ ಶಾಖೆ (ಕನ್ನಡ),
5. ಕ್ರೋಢೀಕರಣ ಮತ್ತು ಪ್ರಕಟಣಾ ಶಾಖೆ,
6. ಅಧಿನ್ಯಾಯ ಶಾಖೆ,
7. ಕಾವೇರಿ ಜಲವಿವಾದ ಶಾಖೆ.

ಆಡಳಿತ ಶಾಖೆಯು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಗೆ ಸಂಬಂಧಿಸಿದ ಆಡಳಿತ ವಿಷಯಗಳನ್ನು ನಿರ್ವಹಿಸುವುದರ ಜೊತೆಗೆ ಇದೇ ಇಲಾಖೆಯ ಆಡಳಿತ ನಿಯಂತ್ರಣದಲ್ಲಿರುವ ಈ ಕೆಳಕಾಣಿಸಿದ ಇಲಾಖೆಗಳಿಗೆ ಸಂಬಂಧಿಸಿದ ಸೇವಾ ಮತ್ತು ಆಡಳಿತ ವಿಷಯಗಳ ಬಗ್ಗೆಯೂ ವ್ಯವಹರಿಸುತ್ತಿದೆ, ಎಂದರೆ:

1. ಅಡ್ವೊಕೇಟ್ ಜನರಲರವರ ಕಛೇರಿ,
2. ಅಧೀನ ನ್ಯಾಯಾಂಗ
3. ಭಾಷಾಂತರ ಇಲಾಖೆ
4. ಪ್ರಾಸಿಕ್ಯೂಷನ್ಸ್ ಮತ್ತು ಸರ್ಕಾರಿ ವ್ಯಾಜ್ಯ ವ್ಯವಹಾರಗಳ ಇಲಾಖೆ ಮತ್ತು
5. ಕರ್ನಾಟಕ ಕಾನೂನು ಸೇವಾ ಮಂಡಳಿ.

5909-1

ನವದೆಹಲಿಯ ಸರ್ವೋಚ್ಚ ನ್ಯಾಯಾಲಯದಲ್ಲಿನ ಕರ್ನಾಟಕ ರಾಜ್ಯದ ವ್ಯಾಜ್ಯಗಳನ್ನು ನೋಡಿಕೊಳ್ಳುವ ಸಲುವಾಗಿ, ಅಪರ ಕಾರ್ಯದರ್ಶಿ ಹಾಗೂ ಕಾನೂನು ಸಲಹೆಗಾರರನ್ನು ನೇಮಿಸುವುದರ ಮೂಲಕ ಕರ್ನಾಟಕ ಭವನದಲ್ಲಿ ಕಾನೂನು ಕೋಶವನ್ನು ಬಲಪಡಿಸಲಾಗಿದೆ.

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ವೃಂದ ಬಲವು ಈ ಕೆಳಕಂಡಂತಿದೆ:—

1. ಸರ್ಕಾರದ ಕಾರ್ಯದರ್ಶಿ ಮತ್ತು ಪ್ರಾರೂಪಕಾರರು,
2. ಅಪರ ಕಾರ್ಯದರ್ಶಿ (ಅಭಿಪ್ರಾಯ),
3. ಮೂವರು ಅಡಿಷನಲ್ ಪ್ರಾರೂಪಕಾರರು ಮತ್ತು ಪದನಿಮಿತ್ತ ಅಡಿಷನಲ್ ಕಾರ್ಯದರ್ಶಿಗಳು,
4. ಮೂವರು ಅಪರ ಕಾರ್ಯದರ್ಶಿಗಳು (ವ್ಯಾಜ್ಯಗಳ ಇಲಾಖೆ)
5. ಉಪ ಕಾರ್ಯದರ್ಶಿ (ಆಡಳಿತ),
6. ಐದು ಅಡಿಷನಲ್ ಸಾಲಿಸಿಟರ್ ಮತ್ತು ಪದನಿಮಿತ್ತ ಉಪಕಾರ್ಯದರ್ಶಿಗಳು,
7. ಸಾಲಿಸಿಟರ್ ಮತ್ತು ಪದನಿಮಿತ್ತ ಉಪ ಕಾರ್ಯದರ್ಶಿಗಳು,
8. ಮೂವರು ಸಹಾಯಕ ಪ್ರಾರೂಪಕಾರರು ಮತ್ತು ಪದನಿಮಿತ್ತ ಉಪ ಕಾರ್ಯದರ್ಶಿಗಳು
9. ಒಬ್ಬರು ಸಹಾಯಕ ಡ್ರಾಫ್ಟ್ಸ್‌ಮನ್ ಮತ್ತು ಪದನಿಮಿತ್ತ ಅಧೀನ ಕಾರ್ಯದರ್ಶಿಗಳು,
10. ನಾಲ್ಕು ಸಹಾಯಕ ಸಾಲಿಸಿಟರ್‌ಗಳು ಮತ್ತು ಪದನಿಮಿತ್ತ ಅಧೀನ ಕಾರ್ಯದರ್ಶಿಗಳು

11. ಮೂವರು ಅಧೀನ ಕಾರ್ಯದರ್ಶಿಗಳು (ಅಭಿಪ್ರಾಯ)
12. ಅಪರ ನಿರ್ದೇಶಕರು ಮತ್ತು ಪದನಿಮಿತ್ತ ಉಪ ಕಾರ್ಯದರ್ಶಿ (ಕನ್ನಡ ಪ್ರಾರೂಪಣ ಕೋಶ)
13. ಇಬ್ಬರು ಸಹಾಯಕ ನಿರ್ದೇಶಕರು (ಕನ್ನಡ ಪ್ರಾರೂಪಣ),
14. ಒಬ್ಬರು ಸಂಶೋಧನಾಧಿಕಾರಿ,
15. ಇಬ್ಬರು ಅಧೀನ ಕಾರ್ಯದರ್ಶಿಗಳು (ಆಡಳಿತ)
16. ಹದಿನೇಳು ಶಾಖಾಧಿಕಾರಿಗಳು.

ಹೆಚ್ಚುವರಿ ಕಾನೂನು ಕಾರ್ಯದರ್ಶಿ (ಅಭಿಪ್ರಾಯ), ಹೆಚ್ಚುವರಿ ಪ್ರಾರೂಪಕಾರ ಮತ್ತು ಪದನಿಮಿತ್ತ ಹೆಚ್ಚುವರಿ ಕಾರ್ಯದರ್ಶಿ, ಉಪ ಕಾರ್ಯದರ್ಶಿ (ಆಡಳಿತ), ಸಹಾಯಕ ಪ್ರಾರೂಪಕಾರ ಮತ್ತು ಪದನಿಮಿತ್ತ ಉಪ ಕಾರ್ಯದರ್ಶಿ, ಅಧೀನ ಕಾರ್ಯದರ್ಶಿಗಳು, ಸಹಾಯಕ ಸಾಲಿಸಿಟರ್ ಮತ್ತು ಪದನಿಮಿತ್ತ ಅಧೀನ ಕಾರ್ಯದರ್ಶಿ, ಅಧೀನ ಕಾರ್ಯದರ್ಶಿ (ಆಡಳಿತ — 1), ಅಧೀನ ಕಾರ್ಯದರ್ಶಿ (ಆಡಳಿತ—2) ಮತ್ತು ಎಲ್ಲಾ ಹದಿನೇಳು ಶಾಖಾಧಿಕಾರಿಗಳು ಕರ್ನಾಟಕ ಸರ್ಕಾರದ ಸಚಿವಾಲಯದ ಸೇವೆಗೆ ಸೇರಿದವರಾಗಿದ್ದಾರೆ. ಉಳಿದ ಅಧಿಕಾರಿಗಳು ಕರ್ನಾಟಕ ನ್ಯಾಯಿಕ ಸೇವೆ: ಭಾಷಾಂತರ ಇಲಾಖೆಗೆ ಸೇರಿದವರಾಗಿದ್ದಾರೆ.

ಸರ್ವೋಚ್ಚ ನ್ಯಾಯಾಲಯದಲ್ಲಿ ಇರುವ ವ್ಯಾಜ್ಯಗಳೂ ಸೇರಿದಂತೆ ರಾಜ್ಯದೊಳಗಿರುವ ನ್ಯಾಯಾಲಯಗಳಲ್ಲಿ ಮತ್ತು ರಾಜ್ಯದ ಹೊರಗಿನ ನ್ಯಾಯಾಲಯಗಳಲ್ಲಿ ಇರುವ ವ್ಯಾಜ್ಯಗಳ ವ್ಯವಹಾರಗಳನ್ನು ಇಲಾಖೆಯ ವ್ಯಾಜ್ಯಗಳ ಶಾಖೆಗಳು

ನೋಡಿಕೊಳ್ಳುತ್ತವೆ. ರಾಜ್ಯ ಕಾನೂನು ಅಧಿಕಾರಿಗಳಿಗೆ ಸಂಬಂಧಿಸಿದ ಸಂಭಾವನೆ ಬಿಲ್ಲುಗಳ ಪರಿಶೀಲನೆ ಮತ್ತು ಮುಂಜೂರಾತಿಯ ಕೆಲಸ ಕಾರ್ಯಗಳನ್ನು ವ್ಯಾಜ್ಯಗಳ ಶಾಖೆಗಳು ನೋಡಿಕೊಳ್ಳುತ್ತವೆ.

ಪ್ರಾರೂಪಣಾ ಶಾಖೆಯು ಶಾಸನದ ಪ್ರಾರೂಪಣೆ ಹಾಗೂ ಶಾಸನ ಪ್ರದತ್ತ ನಿಯಮಗಳು, ಅಧಿಸೂಚನೆಗಳು, ಮೊದಲಾದವುಗಳ ಪರಿಷ್ಕರಣೆಯ ಕಾರ್ಯದ ಪ್ರಭಾರವನ್ನು ಹೊಂದಿದೆ. ಕನ್ನಡ ಪ್ರಾರೂಪಣಾ ಶಾಖೆಯು ವಿಧೇಯಕಗಳು, ಅಧ್ಯಾದೇಶ ಮುಂತಾದವುಗಳನ್ನು ಕನ್ನಡದಲ್ಲಿ ತಯಾರಿಸುವ ಹಾಗೂ ವಿಧೇಯಕಗಳು ಮುಂತಾದವುಗಳನ್ನು ಭಾಷಾಂತರಿಸುವ ಕಾರ್ಯವನ್ನು ನಿರ್ವಹಿಸುತ್ತದೆ.

ಇಲಾಖೆಯ ಕ್ರೋಢೀಕರಣ ಮತ್ತು ಪ್ರಕಟಣಾ ಶಾಖೆಯು ತಹಲ್‌ವರೆಗಿನ ತಿದ್ದುಪಡಿಗಳನ್ನು ಸೇರಿಸಿದ ತರುವಾಯ ರಾಜ್ಯದ ಅಧಿನಿಯಮಗಳನ್ನು ಪುನಃ ಪ್ರಕಟಿಸುವ, ರಾಜ್ಯದ ಸಾಮಾನ್ಯ ಜನತೆಗೆ ಉಪಯೋಗವಾಗುವ ಕೇಂದ್ರ ಅಧಿನಿಯಮಗಳನ್ನು ಪುನಃ ಪ್ರಕಟಿಸುವ ಕಾರ್ಯದ ಪ್ರಭಾರವನ್ನು ಹೊಂದಿದೆ. ಜೊತೆಗೆ ವರ್ಷದಲ್ಲಿ ಜಾರಿಗೆ ತಂದ ರಾಜ್ಯ ಕಾನೂನುಗಳ ವಾರ್ಷಿಕ ಸಂಪುಟವನ್ನು ಪ್ರಕಟಿಸುತ್ತದೆ ಹಾಗೂ ರಾಜ್ಯದಲ್ಲಿ ಜಾರಿಯಲ್ಲಿರುವ ಕಾನೂನುಗಳ ಸಂಹಿತೆಯನ್ನು ತಯಾರಿಸುತ್ತದೆ.

ಅಭಿಪ್ರಾಯ ಶಾಖೆಯು ಸಚಿವಾಲಯದಲ್ಲಿನ ಇಲಾಖೆಗಳಿಗೆ ರಾಜ್ಯ ಸರ್ಕಾರದ ವ್ಯವಹಾರಕ್ಕೆ ಸಂಬಂಧಿಸಿದ ಕಾನೂನು ಮತ್ತು ಸಂವಿಧಾನಿಕ ಸಮಸ್ಯೆಗಳ ಬಗ್ಗೆ ಸಲಹೆ ನೀಡುತ್ತದೆ.

## ಆಡಳಿತ ಶಾಖೆ

ಇಲಾಖೆಯ ಆಡಳಿತ ಶಾಖೆಯ ಮುಖ್ಯ ಕಾರ್ಯಗಳು ಈ ರೀತಿ ಇವೆ:

1. ರಾಜ್ಯದ ವ್ಯಾಜ್ಯ ವ್ಯವಹಾರಗಳನ್ನು ನಡೆಸಲು ಕಾನೂನು ಅಧಿಕಾರಿಗಳ ನೇಮಕಾತಿ;
2. ನೋಟರಿಗಳ ನೇಮಕಾತಿ;
3. ಅಫಿಷಿಯಲ್ ರಿಸೀವರುಗಳ ನೇಮಕಾತಿ;
4. ಅಡ್ಮಿನಿಸ್ಟ್ರೇಟರ್ ಜನರಲ್ ಮತ್ತು ಅಫಿಷಿಯಲ್ ಟ್ರಸ್ಟಿಗಳ ನೇಮಕಾತಿ;
5. ಈ ಕೆಳಕಂಡ ಇಲಾಖೆಗಳಿಗೆ ಸಂಬಂಧಿಸಿದ ವಿಷಯಗಳು, ಅಂದರೆ —

   ಅ) ಅಡ್ವೊಕೇಟ್ ಜನರಲ್ ರವರ ಕಛೇರಿ;

   ಆ) ಅಧೀನ ನ್ಯಾಯಾಂಗ;

   ಇ) ಭಾಷಾಂತರ ಇಲಾಖೆ ಮತ್ತು

   ಈ) ಪ್ರಾಸಿಕ್ಯೂಷನ್ಸ್ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ.
6. ರಾಜ್ಯದಲ್ಲಿ ಜಾರಿಯಲ್ಲಿರುವ ಕಾನೂನುಗಳನ್ನು ರಾಜ್ಯದ ನ್ಯಾಯಾಲಯಗಳ ಅಧಿಕೃತ ಭಾಷೆಯಾದ ಕನ್ನಡಕ್ಕೆ ಭಾಷಾಂತರಿಸುವುದು ಮತ್ತು ಕರ್ನಾಟಕ ರಾಜ್ಯ ಭಾಷಾ ಅಧಿನಿಯಮ, 1963ರ 5 'ಎ' ಪ್ರಕರಣದಡಿಯಲ್ಲಿ ಕನ್ನಡ ಅಧಿಕೃತ ಭಾಷಾಂತರಗಳನ್ನು ಪ್ರಕಟಿಸುವುದು;
7. ಸಂಸದೀಯ ವ್ಯವಹಾರಗಳಿಗೆ ಸಂಬಂಧಿಸಿದ ವಿಷಯಗಳು ಮತ್ತು

3\. ರಾಜ್ಯದಲ್ಲಿರುವ ವಕೀಲರ ಸಂಘಗಳಿಗೆ ಅನುದಾನಗಳು.

1. ಅಡ್ವೊಕೇಟ್ ಜನರಲ್ ರವರ ಕಛೇರಿ:—

ಉಚ್ಚ ನ್ಯಾಯಾಲಯ ಮತ್ತು ಕರ್ನಾಟಕ ಅಧೀನ ನ್ಯಾಯಾಲಯಗಳಿಗೆ ಸೇರಿದ ಕಾನೂನು ಅಧಿಕಾರಿಗಳು ರಾಜ್ಯದ ಅಡ್ವೊಕೇಟ್ ಜನರಲ್‌ರವರ ಆಡಳಿತ ನಿಯಂತ್ರಣದಲ್ಲಿರುತ್ತಾರೆ. ಸಾಮಾನ್ಯವಾಗಿ ಈ ಕಾನೂನು ಅಧಿಕಾರಿಗಳು ಮೂರು, ಮೂರು ವರ್ಷಗಳ ಅವಧಿಗಾಗಿ ನೇಮಕಗೊಳ್ಳುತ್ತಾರೆ. ಅವರ ಕಾರ್ಯ ನಿರ್ವಹಣೆ ತೃಪ್ತಿಕರವಾಗಿದ್ದರೆ ನೇಮಕಾತಿಯನ್ನು ಒಟ್ಟು ಆರು ವರ್ಷಗಳ ಗರಿಷ್ಠ ಅವಧಿಯವರೆಗೆ ವಿಸ್ತರಿಸಲಾಗುವುದು.

ಕ್ರಿಮಿನಲ್ ಮೊಕದ್ದಮೆಗಳ ವಿಷಯಕ್ಕೆ, ಸಂಬಂಧಿಸಿದಂತೆ, ಜಿಲ್ಲೆಯಲ್ಲಿನ ಕೆಲಸದ ಪ್ರಮಾಣವನ್ನು ಗಮನದಲ್ಲಿರಿಸಿ ಒಬ್ಬರು ಅಥವಾ ಹೆಚ್ಚು ಮಂದಿ ಪಬ್ಲಿಕ್ ಪ್ರಾಸಿಕ್ಯೂಟರನ್ನು ನೇಮಿಸಲಾಗುತ್ತದೆ. ಈ ನೇಮಕಾತಿಯನ್ನು, ದಂಡ ಪ್ರಕ್ರಿಯಾ ಸಂಹಿತೆ 1973ರ 24ನೇ ಪ್ರಕರಣದ ಅನುಸಾರ ಮಾಡಲಾಗುತ್ತದೆ. ಕೆಲವು ಪಬ್ಲಿಕ್ ಪ್ರಾಸಿಕ್ಯೂಟರುಗಳನ್ನು ಪಬ್ಲಿಕ್ ಪ್ರಾಸಿಕ್ಯೂಟರುಗಳ ಉದ್ಯೋಗಿ ವೃಂದದಿಂದ ಸಹ ನೇಮಕ ಮಾಡಲಾಗಿದೆ. ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳಲ್ಲಿನ ಪ್ರಾಸಿಕ್ಯೂಷನ್ ಕ್ರಮವನ್ನು ಪ್ರಾಸಿಕ್ಯೂಷನ್ಸ್ ಮತ್ತು, ಸರ್ಕಾರಿ ವ್ಯಾಜ್ಯ ವ್ಯವಹಾರಗಳ ಇಲಾಖೆಗೆ ಸೇರಿದ ಖಾಯಂ ನೌಕರರಾಗಿರುವ ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರುಗಳು ನಡೆಸುತ್ತಾರೆ ಮತ್ತು ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟರುಗಳ ನ್ಯಾಯಾಲಯಗಳಲ್ಲಿ ಹಿರಿಯ ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರುಗಳು ಕಾರ್ಯ ನಿರ್ವಹಿಸುತ್ತಾರೆ.

ಸಿವಿಲ್ ಮೊಕದ್ದಮೆಗಳ ವಿಷಯಕ್ಕೆ ಸಂಬಂಧಿಸಿದಂತೆ, ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲಾ ಸರ್ಕಾರಿ ವಕೀಲರನ್ನು ನೇಮಕ ಮಾಡಿಕೊಳ್ಳಲಾಗುವುದು ಮತ್ತು ಕೆಲಸದ ಒತ್ತಡವು ಹೆಚ್ಚಿರುವ ಕಡೆ ಹೆಚ್ಚುವರಿ ಸರ್ಕಾರಿ ವಕೀಲರನ್ನು ನೇಮಕ ಮಾಡಿಕೊಳ್ಳಲಾಗುವುದು.

ಸರ್ಕಾರವು, ಮುನ್ಸಿಫ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟ್ ಜಂಟಿ ನ್ಯಾಯಾಲಯಗಳಿರುವ ತಾಲ್ಲೂಕು ಸ್ಥಳಗಳಲ್ಲಿ ಸರ್ಕಾರಿ ಸಿವಿಲ್ ಮತ್ತು ಕ್ರಿಮಿನಲ್ ವ್ಯಾಜ್ಯಗಳಿಗೆ ಸಂಬಂಧಿಸಿದ ಕೆಲಸಗಳನ್ನು ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್‌ಗಳಿಗೆ ವಹಿಸಿದೆ. ಅವರುಗಳಿಗೆ ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್ ಹಾಗೂ ಸಹಾಯಕ ಸರ್ಕಾರಿ ವಕೀಲರೆಂದು ಪದನಾಮ ನೀಡಲಾಗಿದೆ. ಸರ್ಕಾರವು ಈ ಸಂಬಂಧದ ಕೆಲಸ ಮೇಲ್ವಿಚಾರಣಾ ಕಾರ್ಯಗಳನ್ನು ಪ್ರಾಸಿಕ್ಯೂಷನ್ ಮತ್ತು ಸರ್ಕಾರದ ವ್ಯಾಜ್ಯ ವ್ಯವಹಾರಗಳ ಇಲಾಖೆಗೆ ವಹಿಸಿಕೊಟ್ಟಿದೆ.

ಸರ್ವೋಚ್ಚ ನ್ಯಾಯಾಲಯದಲ್ಲಿನ ಸರ್ಕಾರದ ವ್ಯಾಜ್ಯ ವ್ಯವಹಾರಗಳನ್ನು ನೋಡಿಕೊಳ್ಳಲು ಅಡ್ವೊಕೇಟ್ ಆನ್ ರೆಕಾರ್ಡ್ ರವರನ್ನು ನೇಮಿಸಲಾಗುತ್ತದೆ. ಪುನಃ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಾಜ್ಯ ಸರ್ಕಾರದ ವ್ಯಾಜ್ಯ ವ್ಯವಹಾರಗಳನ್ನು ನೋಡಿಕೊಳ್ಳಲು ನಾಲ್ಕು ಅಡ್ವೊಕೇಟ್ ಆನ್ ರೆಕಾರ್ಡ್ ಇವರನ್ನು ನೇಮಿಸಲಾಗಿದೆ.

## ನೋಟರಿಗಳ ನೇಮಕಾತಿ

ಆಡಳಿತ ಶಾಖೆಯು ನೋಟರಿಗಳ ಅಧಿನಿಯಮವು, 1952 ಮತ್ತು ನೋಟರಿಗಳ ನಿಯಮಾವಳಿ, 1956ರ ಅನುಸಾರವಾಗಿ

ರಾಜ್ಯ ಸರ್ಕಾರದ ಕೋಟಾದಿಂದ ನೋಟರಿಗಳನ್ನು ನೇಮಕ ಮಾಡುವ ಹಾಗೂ ಅವರ ಪ್ರಾಕ್ಟೀಸ್ ಸರ್ಟಿಫಿಕೇಟ್ ನವೀಕರಿಸುವ ಪ್ರಾಧಿಕಾರವನ್ನು ಹೊಂದಿದೆ. ರಾಜ್ಯವು ನೇಮಕ ಮಾಡಬೇಕಾದ ನೋಟರಿಗಳ ಕೋಟಾವನ್ನು 70 ಎಂದು 1980ರಲ್ಲಿ ನಿಗದಿ ಮಾಡಲಾಗಿತ್ತು. ವಿವಿಧ ಪ್ರದೇಶಗಳಲ್ಲಿ ಸಬಲ ವಾಣಿಜ್ಯಗಳ ಹೆಚ್ಚಳ, ತ್ವರಿತಗತಿಯ ಔದ್ಯೋಗೀಕರಣ, ರಾಜ್ಯ ಅಭಿವೃದ್ಧಿ ಶೈಕ್ಷಣಿಕ ಸಂಸ್ಥೆಗಳ ಸಂಖ್ಯೆಯಲ್ಲಿ ವೃದ್ಧಿ ಮುಂತಾದ ಕಾರಣಗಳಿಂದಾಗಿ, ನೋಟರಿಗಳೇ ಇಲ್ಲದ ಪ್ರದೇಶಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿ ನೋಟರಿಗಳನ್ನು ನೇಮಿಸಬೇಕೆಂದು ಅಥವಾ ಇರುವ ನೋಟರಿಗಳ ಸಂಖ್ಯೆಯನ್ನು ಮತ್ತಷ್ಟು ಹೆಚ್ಚಿಸಬೇಕೆಂದು ಹಲವೇ ಬೇಡಿಕೆಗಳು ಬರುತ್ತಿವೆ. ಆದ್ದರಿಂದ, ರಾಜ್ಯವು ನೇಮಕ ಮಾಡಬೇಕಾದ ನೋಟರಿಗಳ ಕೋಟಾವನ್ನು ಈಗಿರುವ 70ರಿಂದ 200ಕ್ಕೆ ಏರಿಸಲಾಯಿತು, ಮತ್ತು ಇತ್ತೀಚೆಗೆ 200 ರಿಂದ 350ಕ್ಕೆ ಹೆಚ್ಚಿಸಲಾಗಿದೆ. ಈವರೆಗೂ 164 ನೋಟರಿಗಳು ಇದ್ದರು. ಹಿಂದಿನ ವರ್ಷದಲ್ಲಿ 33 ನೋಟರಿಗಳನ್ನು ನೇಮಕ ಮಾಡಲಾಗಿದೆ. ಹೀಗಾಗಿ ದಿನಾಂಕ 31-12-1994ರಂದು ಇದ್ದಂತೆ ಒಟ್ಟು ನೋಟರಿಗಳ ಸಂಖ್ಯೆ 197 ಆಗಿರುತ್ತದೆ. ಇದಲ್ಲದೆ, ರಾಜ್ಯದಲ್ಲಿ ಕೇಂದ್ರ ಸರ್ಕಾರದ ನೋಟರಿಗಳಾಗಿ ಪ್ರಾಕ್ಟೀಸ್ ಮಾಡುತ್ತಿರುವಂತಹ ಕೇಂದ್ರ ಸರ್ಕಾರದಿಂದ ನೇಮಕಗೊಂಡ ನೋಟರಿಗಳೂ ಇದ್ದಾರೆ.

## ಅಫಿಷಿಯಲ್ ರಿಸೀವರ ನೇಮಕ

ದಿವಾಳಿ ಅಧಿನಿಯಮದ ಮೇರೆಗೆ ಅಫಿಷಿಯಲ್ ರಿಸೀವರರನ್ನು ಹೈ ಕೋರ್ಟ್ ನೇಮಕ ಮಾಡುತ್ತದೆ. ಸಾಮಾನ್ಯವಾಗಿ ಒಂದು ಬಾರಿಗೆ ಮೂರು ವರ್ಷಗಳ ಅವಧಿಗಾಗಿ ಒಬ್ಬ ಅಫಿಷಿಯಲ್ ರಿಸೀವರನನ್ನು ನೇಮಕ ಮಾಡಿಕೊಳ್ಳಲಾಗುತ್ತದೆ. ಆತನ ಕೆಲಸವು ತೃಪ್ತಿಕರವಾಗಿದೆ ಎಂದು ಕಂಡು ಬಂದರೆ ಆತನ ಸೇವೆಯನ್ನು ಮೂರು ವರ್ಷಗಳ

ಇನ್ನೊಂದು ಅವಧಿಗಾಗಿ ಮುಂದುವರಿಸಲಾಗುತ್ತದೆ. ಸರ್ಕಾರಿ ವಕೀಲರನ್ನು ನೇಮಕ ಮಾಡಿಕೊಳ್ಳುವಂತಹ ರೀತಿಯಲ್ಲಿಯೇ ಈ ನೇಮಕವನ್ನು ಮಾಡಿಕೊಳ್ಳಲಾಗುತ್ತದೆ.

**ಅಡ್ಮಿನಿಸ್ಟ್ರೇಟರ್ ಜನರಲ್ ಮತ್ತು ಅಫಿಷಿಯಲ್ ಟ್ರಸ್ಟಿಯ ಸೇವೆ:-**

ಅಡ್ವೊಕೇಟ್ ಜನರಲ್ ರವರ ಶಿಫಾರಸ್ಸಿನ ಮೇರೆಗೆ ಸರ್ಕಾರದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಯು ಅಡ್ಮಿನಿಸ್ಟ್ರೇಟರ್ ಜನರಲ್ ಮತ್ತು ಅಫಿಷಿಯಲ್ ಟ್ರಸ್ಟಿಯನ್ನು ನೇಮಕ ಮಾಡುತ್ತದೆ ಮತ್ತು ಇವರು ಈ ಇಲಾಖೆಯ ಆಡಳಿತ ನಿಯಂತ್ರಣಕ್ಕೊಳಪಡುತ್ತಾರೆ.

**ರಾಜ್ಯದಲ್ಲಿನ ಬಾರ್ ಅಸೋಸಿಯೇಷನ್‌ಗಳಿಗೆ ಅನುದಾನ:**

ನಿಧಿಗಳ ಲಭ್ಯತೆಗೆ ಒಳಪಟ್ಟು 1983ರ ಬಾರ್ ಅಸೋಸಿಯೇಷನ್‌ಗಳಿಗೆ ಕರ್ನಾಟಕ ಸಹಾಯಾನುದಾನ ನಿಯಮಗಳ ಪ್ರಕಾರ ಪ್ರತಿವರ್ಷ ರಾಜ್ಯದಲ್ಲಿರುವ ಬಾರ್ ಅಸೋಸಿಯೇಷನ್‌ಗಳಿಗೆ ಅನುದಾನಗಳನ್ನು ನೀಡಲಾಗುತ್ತದೆ.

1994-95ರ ಸಾಲಿಗಾಗಿ ವಿವಿಧ ಬಾರ್ ಅಸೋಸಿಯೇಷನ್‌ಗಳಿಗೆ ಸಹಾಯಾನುದಾನ ಮಂಜೂರಾತಿಗಾಗಿ 11.60 ಲಕ್ಷ ರೂ.ಗಳನ್ನು ಬಜೆಟ್ಟಿನಲ್ಲಿ ಒದಗಿಸಲಾಗಿದೆ. ಇದರ ಪೈಕಿ ಒಟ್ಟು 3,67,500-00 ರೂ.ಗಳನ್ನು ದಿನಾಂಕ 31-12-94ರ ವರೆಗೆ ಮಂಜೂರು ಮಾಡಲಾಗಿದೆ.

5909-2

## ಕನ್ನಡ ಕಾನೂನು ಪದ ವಿವರಣ ಕೋಶ ಸಮಿತಿಯ ರಚನೆ:

ಸರ್ಕಾರವು ಕನ್ನಡ ಕಾನೂನು ಪದ ವಿವರಣ ಕೋಶವನ್ನು ಹೊರತರುವುದಕ್ಕಾಗಿ ನ್ಯಾಯಾಂಗ, ನ್ಯಾಯಿಕ ವೃತ್ತಿ ಮತ್ತು ಕನ್ನಡ ಹಾಗೂ ಕಾನೂನು ಸಾಹಿತ್ಯಗಳೂ ಸೇರಿದಂತೆ ಅನೇಕ ಕ್ಷೇತ್ರಗಳ ಪ್ರತಿನಿಧಿಗಳನ್ನು ಒಳಗೊಂಡ ಸಮಿತಿಯೊಂದನ್ನು ರಚಿಸಿದೆ.

## 2) ಅಧೀನ ನ್ಯಾಯಾಂಗ:

ಅಧೀನ ನ್ಯಾಯಾಂಗವು ಈ ಮುಂದಿನ ನ್ಯಾಯಾಲಯಗಳ ವರ್ಗಗಳನ್ನು ಒಳಗೊಂಡಿರುತ್ತದೆ.

1. ಬೆಂಗಳೂರು ಮಹಾನಗರಕ್ಕಾಗಿ, ನಗರ ಸಿವಿಲ್ ನ್ಯಾಯಾಲಯಗಳು;
2. ಜಿಲ್ಲಾ ನ್ಯಾಯಾಲಯಗಳು;
3. ಸೆಷನ್ಸ್ ನ್ಯಾಯಾಲಯಗಳು;
4. ಮುಖ್ಯ ಮಹಾನಗರ ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳು ಮತ್ತು ಮಹಾನಗರ ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳು;
5. ಸಿವಿಲ್ ನ್ಯಾಯಾಧೀಶರ ಮತ್ತು ಮುಖ್ಯ ನ್ಯಾಯಿಕ ಮ ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳು;
6. ಲಘು ವ್ಯವಹಾರಗಳ ನ್ಯಾಯಾಲಯ ಮತ್ತು
7. ಮುನ್ಸಿಫ್ ನ್ಯಾಯಾಲಯಗಳು ಮತ್ತು ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳು.

## ಸಿವಿಲ್ ಮೊಕದ್ದಮೆಗಳು:—

ರಾಜ್ಯದಲ್ಲಿರುವ ಎಲ್ಲಾ ಅಧೀನ ನ್ಯಾಯಾಲಯಗಳಲ್ಲಿ ದಿನಾಂಕ 01-01-1994ರಂದು 5,74,197 ಮೊಕದ್ದಮೆಗಳು ಬಾಕಿ ಇದ್ದರೆ, ದಿನಾಂಕ 31-12-1994ರಂದು 6,08,909

ಸಿವಿಲ್ ಮೊಕದ್ದಮೆಗಳು ಬಾಕಿ ಇದ್ದುವು. 01-01-1994ರಿಂದ 31-12-1994ರ ಅವಧಿಯಲ್ಲಿ 2,74,026 ಮೊಕದ್ದಮೆಗಳು ದಾಖಲಾಗಿದ್ದುವು ಮತ್ತು 2,39,314 ಮೊಕದ್ದಮೆಗಳನ್ನು ಇತ್ಯರ್ಥಗೊಳಿಸಲಾಯಿತು.

ಕ್ರಿಮಿನಲ್ ಮೊಕದ್ದಮೆಗಳು:

ದಿನಾಂಕ 01-01-1994ರಂದು 5,16,996 ಮೊಕದ್ದಮೆಗಳು ಬಾಕಿ ಇದ್ದರೆ ದಿನಾಂಕ 31-12-1994ರಂದು 5,66,974 ಕ್ರಿಮಿನಲ್ ಮೊಕದ್ದಮೆಗಳು ಬಾಕಿ ಇದ್ದುವು. 01-01-1994ರಿಂದ 31-12-1994ರ ಅವಧಿಯಲ್ಲಿ 4,81,615 ಮೊಕದ್ದಮೆಗಳು ದಾಖಲಾಗಿದ್ದುವು ಮತ್ತು 4,31,637 ಮೊಕದ್ದಮೆಗಳನ್ನು ಇತ್ಯರ್ಥಗೊಳಿಸಲಾಯಿತು.

2. 01-01-1994ರಂದು 10,91,193 ಮೊಕದ್ದಮೆಗಳು ಬಾಕಿ ಇದ್ದರೆ ದಿನಾಂಕ 31-12-1994ರಂದು ಬಾಕಿ ಇದ್ದ ಒಟ್ಟು ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳು 11,75,883. ವರದಿಯ ಮೇರೆಗೆ, ಈ ಅವಧಿಯಲ್ಲಿ 7,55,641 (ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳು ಸೇರಿ) ಮೊಕದ್ದಮೆಗಳನ್ನು ದಾಖಲು ಮಾಡಲಾಯಿತು ಮತ್ತು 6,70,951 ಮೊಕದ್ದಮೆಗಳನ್ನು ಇತ್ಯರ್ಥಗೊಳಿಸಲಾಯಿತು.

3. ದಿನಾಂಕ 31-12-1994ರಂದು ಇದ್ದಂತೆ ನ್ಯಾಯಿಕ ಅಧಿಕಾರಿಗಳ (ಅನ್ಯ ಕಾರ್ಯನಿಯುಕ್ತರ ಮತ್ತು ರಜಾ ಮೀಸಲಾತಿಯ ಹುದ್ದೆಗಳು ಸೇರಿದಂತೆ) ಮಂಜೂರಾದ ಸಂಖ್ಯೆಯು ಈ ಮುಂದಿನಂತಿರುತ್ತದೆ:-

1. ಜಿಲ್ಲಾ ನ್ಯಾಯಾಧೀಶರು — 114
2. ಸಿವಿಲ್ ನ್ಯಾಯಾಧೀಶರು — 140
3. ಮುನ್ಸಿಫ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟರು. — 279

ಅವುಗಳ ಪೈಕಿ, ಜಿಲ್ಲಾ ನ್ಯಾಯಾಧೀಶರ 41 ಹುದ್ದೆಗಳು, ಸಿವಿಲ್ ನ್ಯಾಯಾಧೀಶರ 23 ಹುದ್ದೆಗಳು ಮತ್ತು ಮುನ್ಸಿಫರ 11 ಹುದ್ದೆಗಳು ಅನ್ಯ ಕಾರ್ಯದ ನಿಮಿತ್ತದ ಹುದ್ದೆಗಳಾಗಿವೆ. ಜಿಲ್ಲಾ ನ್ಯಾಯಾಧೀಶರ ಮತ್ತು ಸಿವಿಲ್ ನ್ಯಾಯಾಧೀಶರ ಪ್ರತಿ 02 ಹುದ್ದೆಗಳು ಮತ್ತು ಮುನ್ಸಿಫರ 14 ಹುದ್ದೆಗಳು ರಜಾ ಮೀಸಲಾತಿ ಹುದ್ದೆಗಳಾಗಿವೆ.

31-12-1994ರಂದು ಇದ್ದಂತೆ, ಜಿಲ್ಲಾ ನ್ಯಾಯಾಧೀಶರ 17 ಹುದ್ದೆಗಳು, ಸಿವಿಲ್ ನ್ಯಾಯಾಧೀಶರ 03 ಹುದ್ದೆಗಳು ಮತ್ತು ಮುನ್ಸಿಫರ 51 ಹುದ್ದೆಗಳು ಖಾಲಿ ಇವೆ.

1994-95ನೇ ಸಾಲಿನಲ್ಲಿ (31-01-1995) 48 ಮುನ್ಸಿಫರನ್ನು ನೇಮಕಾತಿ ಮಾಡಿಕೊಳ್ಳಲಾಯಿತು. ಅವರೆಲ್ಲರೂ ನ್ಯಾಯಿಕ ಅಧಿಕಾರಿಗಳ ತರಬೇತಿ ಹೊಂದಿರುತ್ತಾರೆ.

01-01-1994ರಿಂದ 31-12-1994ರ ಅವಧಿಯಲ್ಲಿ, ಈ ಕೆಳಕಂಡ ನ್ಯಾಯಾಲಯಗಳನ್ನು ಸ್ಥಾಪಿಸಲಾಯಿತು.

| ಕ್ರಮ ಸಂಖ್ಯೆ | ನ್ಯಾಯಾಲಯಗಳು | ಸ್ಥಾಪನೆಯಾದ ದಿನಾಂಕ |
|---|---|---|
| 1. | ಮುನ್ಸಿಫ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಜಗಳೂರು, ಚಿತ್ರದುರ್ಗ ಜಿಲ್ಲೆ | 22-01-1994 |

2) ಮುನ್ಸಿಫ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಚಳ್ಳಕೆರೆ, ಚಿತ್ರದುರ್ಗಾ ಜಿಲ್ಲೆ. — 15-01-1994

3) ಮುನ್ಸಿಫ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ನಿಪ್ಪಾಣಿ, ಬೆಳಗಾಂ ಜಿಲ್ಲೆ. — 26-02-1994

4) ಮುನ್ಸಿಫ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಶಿಗ್ಗಾಂವಿ, ಧಾರವಾಡ ಜಿಲ್ಲೆ. — 19-03-1994

5) ಹೆಚ್ಚುವರಿ ಮುನ್ಸಿಫ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಅಥಣಿ, ಬೆಳಗಾಂ ಜಿಲ್ಲೆ. — 11-03-1994.

ಇದಲ್ಲದೆ, ಪೈಲಟ್ ಪ್ರಾಜೆಕ್ಟ್ ಯೋಜನೆಯಡಿ ಬಿಜಾಪುರ, ಚಿಕ್ಕಮಗಳೂರು, ಕೊಡಗು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಈ ಕೆಳಕಂಡ 17 ನ್ಯಾಯಾಲಯಗಳನ್ನು ಸ್ಥಾಪಿಸಲಾಯಿತು.

1) ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು,

2) ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು.

3) ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಬಿಜಾಪುರ,

4) ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಶ್ರೀರಂಗಪಟ್ಟಣ,

5) ಹೆಚ್ಚುವರಿ ಮುನ್ಸಿಫ್ ನ್ಯಾಯಾಲಯ, ಮಂಡ್ಯ (2 ನ್ಯಾಯಾಲಯಗಳು)

6) - ಮಳವಳ್ಳಿ,

7) - ನಾಗಮಂಗಲ,

8) - ಚಿಕ್ಕಮಗಳೂರು,

9) - ಕಡೂರು

10) ಜೆಎಂಎಫ್‌ಸಿ ಮುನ್ಸಿಫ್ ನ್ಯಾಯಾಲಯ, ಮುಧೋಳ,
11) " ಕೊಪ್ಪ,
12) " ಬಿಜಾಪುರ,
13) " ಇಂಡಿ,
14) " ಬಸವನಬಾಗೇವಾಡಿ,
15) " ಮುದ್ದೇಬಿಹಾಳ,
16) " ಜಮಖಂಡಿ.

01-01-1994ರಿಂದ 31-12-1994ರ ಅವಧಿಯಲ್ಲಿ ಅಧೀನ ನ್ಯಾಯಾಲಯಗಳಿಂದ ಮಾಡಲಾದ ವೆಚ್ಚ 29,83,44,279=00 ರೂ.ಗಳು.

3. ಭಾಷಾಂತರ ನಿರ್ದೇಶನಾಲಯ:

ಭಾಷಾಂತರ ಇಲಾಖೆಯು ಮುಖ್ಯವಾಗಿ ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸುತ್ತದೆ.

1) 1963ರ ಕರ್ನಾಟಕ ರಾಜ ಭಾಷಾ ಅಧಿನಿಯಮದ 5(ಬಿ) ಪ್ರಕರಣದ ಮೇರೆಗೆ, ರಾಜ್ಯ ಅಧಿನಿಯಮಗಳು ಮತ್ತು ಅವುಗಳ ಮೇರೆಗೆ ರಚಿಸಿದ ನಿಯಮಗಳ ಕನ್ನಡ ಭಾಷಾಂತರ;

2) ಕೇಂದ್ರ ಅಧಿನಿಯಮಗಳ ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973ರ 2(ಎ) ಪ್ರಕರಣದ ಮೇರೆಗೆ, ಕೇಂದ್ರ ಅಧಿನಿಯಮಗಳ ಕನ್ನಡ ಭಾಷಾಂತರ;

3) ರಾಜ್ಯದ ಅಧಿಕೃತ ಭಾಷಾ ನೀತಿಯ ದೃಷ್ಟಿಯಿಂದ ಅಧಿಸೂಚನೆಗಳು, ಅಧಿಕೃತ ಜ್ಞಾಪನಗಳು, ಶಾಸನಾತ್ಮಕ ಆದೇಶಗಳು, ಸಮಿತಿಗಳ ವರದಿಗಳು, ವಿಚಾರಣಾ ಆಯೋಗದ ವರದಿಗಳು, ವಾರ್ಷಿಕ ವರದಿಗಳು, ವಾರ್ಷಿಕ ಆಡಳಿತ ವರದಿಗಳು, ಸಚಿವಾಲಯದ ಇಲಾಖೆಗಳು ಮತ್ತು ಇತರ ಇಲಾಖಾ ಮುಖ್ಯಸ್ಥರು ಕಳುಹಿಸಿಕೊಟ್ಟ ಅರ್ಜಿಗಳು (ಒಪ್ಪಂದಗಳು ಮೊದಲಾದ) ಇತರ ಸಂಕೀರ್ಣ ವಿಷಯಗಳನ್ನು ಕನ್ನಡದಿಂದ ಇಂಗ್ಲೀಷಿಗೆ ಹಾಗೂ ಇಂಗ್ಲೀಷಿನಿಂದ ಕನ್ನಡಕ್ಕೆ ಭಾಷಾಂತರಿಸುವುದು; ಮತ್ತು ಸಚಿವಾಲಯದ ಇಲಾಖೆಗಳು ಮತ್ತು ಇಲಾಖಾ ಮುಖ್ಯಸ್ಥರು ಕಳುಹಿಸಿ ಕೊಟ್ಟ ಅತ್ಯವಶ್ಯಕ ಭಾಷೆಯ ಅರ್ಜಿಗಳನ್ನು

ಕನ್ನಡಕ್ಕೆ ಅಥವಾ ಇಂಗ್ಲೀಷಿಗೆ ಭಾಷಾಂತರಿಸುವುದು;

ಮತ್ತು

4) ಸರ್ವೋಚ್ಛ ನ್ಯಾಯಾಲಯದಲ್ಲಿ ದಾಖಲಾಗಿರುವ ವಿಶೇಷ ಅನುಮತಿ ಅರ್ಜಿಗಳಿಗೆ ಸಂಬಂಧಿಸಿದ ಮೊಕದ್ದಮೆಗಳಲ್ಲಿರುವ ಕನ್ನಡ ವಿಷಯಗಳನ್ನು ಇಂಗ್ಲೀಷಿಗೆ ಭಾಷಾಂತರಿಸುವುದನ್ನು ನಿರ್ದೇಶನಾಲಯದಲ್ಲಿ ಕೈಗೊಳ್ಳಲಾಗುತ್ತಿದೆ.

ಕರ್ನಾಟಕ ರಾಜಭಾಷಾ (ತಿದ್ದುಪಡಿ) ಅಧಿನಿಯಮ, 1974 5-ಎ ಪ್ರಕರಣಕ್ಕನುಸಾರವಾಗಿ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973ರ 2(ಎ) ಪ್ರಕರಣದ ಮೇರೆಗೆ ಭಾಷಾಂತರ ನಿರ್ದೇಶನಾಲಯವು ಅಧಿನಿಯಮಗಳ ಭಾಷಾ ಭಾಷಾಂತರ ಕಾರ್ಯವನ್ನು ಕೈಗೊಂಡ ತರುವಾಯ, ಕೇಂದ್ರ ಅಧಿನಿಯಮಗಳ ಸಂಬಂಧದಲ್ಲಿ ರಾಷ್ಟ್ರಪತಿಯವರ ಅಥವಾ ರಾಜ್ಯ ಅಧಿನಿಯಮಗಳ ಸಂಬಂಧದಲ್ಲಿ ರಾಜ್ಯಪಾಲರ ಅನುಮೋದನೆ ಪಡೆದು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟವಾದ ನಂತರ ಅದನ್ನು ಅಧಿಕೃತ ಕನ್ನಡ ಭಾಷಾಂತರ ಪಾಠವೆಂದು ಪರಿಗಣಿಸಲಾಗುವುದು. ಸಂವಿಧಾನದ ಮೇರೆಗೆ ಅಥವಾ ಯಾವುದೇ ಕೇಂದ್ರ ಅಧಿನಿಯಮಗಳ ಅಥವಾ ಯಾವುದೇ ರಾಜ್ಯ ಅಧಿನಿಯಮ ಅಥವಾ ರಾಜ್ಯದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ರಾಜ್ಯ ಸರ್ಕಾರ ಅಥವಾ ಇತರ ಪ್ರಾಧಿಕಾರ ಅಥವಾ ರಾಜ್ಯ ಸರ್ಕಾರದ ಅಧಿಕಾರಿಯು ಹೊರಡಿಸಿದ ಯಾವುದೇ ಆದೇಶ, ನಿಯಮ, ವಿನಿಯಮ ಅಥವಾ ಉಪವಿಧಿಗಳ ಭಾಷಾಂತರ ಕಾರ್ಯವನ್ನು ಈ ನಿರ್ದೇಶನಾಲಯವು ನಿರ್ವಹಿಸುತ್ತದೆ.

ಸರ್ಕಾರದ ಎಲ್ಲಾ ಇಲಾಖೆಗಳ ದಿನನಿತ್ಯದ ಆಡಳಿತ ನಿರ್ವಹಣೆಗೆ ಅಗತ್ಯವಾದ ಆಡಳಿತ ಸಾಹಿತ್ಯವನ್ನು ಆದ್ಯತಾ ಕ್ರಮದಲ್ಲಿ ಇಂಗ್ಲೀಷಿನಿಂದ ಕನ್ನಡಕ್ಕೆ ಭಾಷಾಂತರಿಸಿ ಪೂರೈಸಲಾಗುತ್ತದೆ.

ಈ ವರ್ಷದಲ್ಲಿ 04 ಕೇಂದ್ರ ಅಧಿನಿಯಮಗಳನ್ನು ಭಾಷಾಂತರಿಸಲಾಗಿದೆ. ಇವುಗಳ ಪೈಕಿ ಮುಖ್ಯವಾದವುಗಳೆಂದರೆ:

1) ವ್ಯಾಪಾರೀ ಹಡಗು ಅಧಿನಿಯಮ, 1951.
2) ರಾಜ್ಯ ಹಣಕಾಸು ಅಧಿನಿಯಮ, 1958.

ಭಾರತ ಸರ್ಕಾರದಿಂದ ಸ್ವೀಕರಿಸಿರುವ 1,2 ಮತ್ತು 3ನೇ ಆದ್ಯತಾ ಪಟ್ಟಿಗಳಲ್ಲಿ ಒಳಗೊಂಡಿರುವ ಕೇಂದ್ರ ಅಧಿನಿಯಮಗಳ ಭಾಷಾಂತರವನ್ನು ಹೆಚ್ಚಿನ ಆದ್ಯತೆಯ ಮೇಲೆ ಕೈಗೊಳ್ಳಲಾಗಿದೆ.

ರಾಜ್ಯ ಅಧಿನಿಯಮಗಳು:

ಈ ವರ್ಷದಲ್ಲಿ 18 ರಾಜ್ಯ ಅಧಿನಿಯಮಗಳನ್ನು 02 ರಾಜ್ಯ ವಿಧೇಯಕಗಳನ್ನು, 03 ರಾಜ್ಯ ಅಧ್ಯಾದೇಶಗಳನ್ನು ಹಾಗೂ 26 ನಿಯಮಗಳನ್ನು ಭಾಷಾಂತರಿಸಲಾಗಿದೆ. ಇವುಗಳ ಪೈಕಿ ಮುಖ್ಯವಾದವುಗಳೆಂದರೆ, ಕರ್ನಾಟಕ ಸಿವಿಲ್ ಸೇವಾ (ಕಾರ್ಯ ನಿರ್ವಹಣಾ ವರದಿಗಳು) ನಿಯಮಗಳು, 1996.

1965,1969,1979, 1981 ಹಾಗೂ 1982ರ ರಾಜ್ಯ ಅಧಿನಿಯಮಗಳ ವಾರ್ಷಿಕ ಸಂಪುಟಗಳ ಭಾಷಾಂತರವನ್ನು ಕಾಲಮಿತಿ ಕಾರ್ಯಕ್ರಮದ ಅಡಿಯಲ್ಲಿ ಭಾಷಾಂತರಿಸಲಾಗಿದೆ. ಅಲ್ಲದೆ, ಸರ್ಕಾರದಿಂದ ಸ್ವೀಕರಿಸಲಾಗಿರುವ 1 ಮತ್ತು 2ನೇ ಆದ್ಯತಾ ಪಟ್ಟಿಗಳಲ್ಲಿ ಒಳಗೊಂಡ ರಾಜ್ಯ ಅಧಿನಿಯಮಗಳನ್ನು ಹೆಚ್ಚಿನ ಆದ್ಯತೆಯ ಮೇಲೆ ಭಾಷಾಂತರಿಸಲಾಗುತ್ತಿದೆ.

ಈ ವರ್ಷದಲ್ಲಿ 3141 ಪುಟಗಳ ಆಡಳಿತಾತ್ಮಕ ವಿಷಯಗಳನ್ನು ಇಂಗ್ಲೀಷಿನಿಂದ ಕನ್ನಡಕ್ಕೆ ಭಾಷಾಂತರಿಸಲಾಗಿದೆ. ವರ್ಷದ ಅವಧಿಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಜಾರಿ ಸಮಿತಿ ವರದಿ ಮತ್ತು ಭಾರತ ಚುನಾವಣಾ ಆಯೋಗದ ಆದೇಶಗಳ ಸಂಕಲನ ಇವುಗಳ ಭಾಷಾಂತರ ಗಮನಾರ್ಹ ಸಾಧನೆಗಳಾಗಿವೆ.

ಈ ಇಲಾಖೆಯಲ್ಲಿ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ವಿಶೇಷ ಅನುಮತಿ ಅರ್ಜಿಗಳಿಗೆ ಸಂಬಂಧಿಸಿದ ಕೆಲವಾರು ಪ್ರಕಟಣೆಗಳಲ್ಲಿಯ ವಿಷಯಗಳನ್ನು ಕನ್ನಡದಿಂದ ಇಂಗ್ಲೀಷಿಗೆ ಭಾಷಾಂತರಿಸುವ ಕಾರ್ಯವನ್ನು ಸಹ ನಿರ್ವಹಿಸಲಾಗುತ್ತಿದೆ. ಈ ವರ್ಷದಲ್ಲಿ 260 ಪುಟಗಳಷ್ಟು ವಿಷಯವನ್ನು ಕನ್ನಡದಿಂದ ಇಂಗ್ಲೀಷಿಗೆ ಭಾಷಾಂತರಿಸಲಾಗಿದೆ.

ಈ ಇಲಾಖೆಯು ಉರ್ದು ಹಾಗೂ ಇತರ ಅಲ್ಪಸಂಖ್ಯಾತ ಭಾಷೆಗಳ ಶಾಖೆಯಲ್ಲಿ 1891 ಪುಟಗಳಷ್ಟು ವಿಷಯಗಳನ್ನು ಭಾಷಾಂತರಿಸಲಾಗಿದೆ.

ಈ ವರ್ಷದಲ್ಲಿ, ಕರ್ನಾಟಕ ರಾಜಭಾಷಾ (ವಿಧಾಯಿಕ) ಆಯೋಗವು 11 ರಾಜ್ಯ ಅಧಿನಿಯಮಗಳ ಹಾಗೂ 5 ಕೇಂದ್ರ ಅಧಿನಿಯಮಗಳ ಭಾಷಾಂತರವನ್ನು ಪರಿಷ್ಕರಿಸಿದೆ. ಕರ್ನಾಟಕ ರಾಜಭಾಷಾ (ವಿಧಾಯಿಕ) ಆಯೋಗವು ಭಾರತ ಸಂವಿಧಾನ (ತಿದ್ದುಪಡಿ) ಅಧಿನಿಯಮಗಳ ಭಾಷಾಂತರವನ್ನು ಪರಿಷ್ಕರಿಸುತ್ತಿದೆ. ವರದಿ ವರ್ಷದಲ್ಲಿ 20 ಕೇಂದ್ರ ಅಧಿನಿಯಮಗಳನ್ನು, 10 ರಾಜ್ಯ ಅಧಿನಿಯಮಗಳನ್ನು ಕನ್ನಡದಲ್ಲಿ

ಅಧಿಕೃತ ಪಾಠಗಳಾಗಿ ಪುಸ್ತಕ ರೂಪದಲ್ಲಿ ಪ್ರಕಟಿಸಲಾಗಿದೆ.

ಅರ್ಹತಾ ಪಟ್ಟಿಗಳಿಗೆ ಮತ್ತು ಕಾಲಮಿತಿ ಕಾರ್ಯಕ್ರಮಕ್ಕೆ ಅನುಸಾರವಾಗಿ ಕೇಂದ್ರ ರಾಜ್ಯ ಅಧಿನಿಯಮಗಳ ಭಾಷಾಂತರ ಮತ್ತು ಕಾಲಮಿತಿ ಕಾರ್ಯಕ್ರಮದ ಜೊತೆಗೆ ರಾಜ್ಯ ಅಧಿನಿಯಮಗಳ ವಾರ್ಷಿಕ ಸಂಪುಟಗಳ ಭಾಷಾಂತರ ವನ್ನು ಕೂಡಾ ಪುನರ್ ಪ್ರಕಟಣೆಗೆ ಆಯ್ಕೆ ಮಾಡಲಾದ ಕೇಂದ್ರ ಅಧಿನಿಯಮಗಳ ಕನ್ನಡ ಭಾಷಾಂತರದ ಪರಿಷ್ಕರಣೆ, ಇವುಗಳನ್ನು ಮುಂಬರುವ ವರ್ಷಗಳಲ್ಲಿ ತೀವ್ರಗತಿಯಲ್ಲಿ ಕೈಗೊಳ್ಳಲಾಗುವುದು.

ಇಲಾಖೆಯ ವಾರ್ಷಿಕ ವೆಚ್ಚ:

| | |
|---|---|
| 1994-95 ವಾರ್ಷಿಕ ಬಜೆಟ್ | ರೂ.78,21,000-00 |
| 1994-95ರಲ್ಲಿ ನಿರ್ವಹಿಸಲಾದ ವಾರ್ಷಿಕ ವೆಚ್ಚ | ರೂ.52,02,126-00 |

4. ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ:

ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ಮುಖ್ಯ ಕಾರ್ಯಗಳು ಕೆಳಗಿನಂತಿವೆ:

1) ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿನ ಸತ್ರ ನ್ಯಾಯಾಲಯಗಳಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿರುವ ಮುನ್ಸಿಫ್ ಮತ್ತು ಮುನ್ಸಿಫ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳಲ್ಲಿ ರಾಜ್ಯ ಸರ್ಕಾರದ ಪರವಾಗಿ ಮೊಕದ್ದಮೆಗಳನ್ನು ನಡೆಸುವುದಕ್ಕೆ ವ್ಯವಸ್ಥೆ ಮಾಡುವುದು;

2) ರಾಜ್ಯದ ಆರಕ್ಷಕ ಇಲಾಖೆಯು ಸೇರಿದಂತೆ ಎಲ್ಲಾ ಇಲಾಖೆಗಳ ಅಧಿಕಾರಿಗಳಿಗೆ ಕ್ರಿಮಿನಲ್ ಮೊಕದ್ದಮೆಗಳಲ್ಲಿ ತನಿಖೆಗೆ ಸಂಬಂಧಪಟ್ಟಂತೆ ಸಲಹೆ ಕೊಡುವುದು;

3) ರಾಜ್ಯ ಸರ್ಕಾರದ ಎಲ್ಲಾ ನ್ಯಾಯಾಲಯಗಳು (ಉಚ್ಚ ನ್ಯಾಯಾಲಯವನ್ನು ಹೊರತುಪಡಿಸಿ) ಹೊರಡಿಸಿದ ತೀರ್ಪುಗಳನ್ನು ಹಾಗೂ ಆದೇಶಗಳನ್ನು ಪರಿಶೀಲಿಸಿ, ಅವಶ್ಯಕತೆ ಕಂಡುಬಂದಲ್ಲಿ ಮೊಕದ್ದಮೆಗಳನ್ನು ಸತ್ರ ಮತ್ತು ಉಚ್ಚ ನ್ಯಾಯಾಲಯಗಳಿಗೆ ಮೇಲ್ಮನವಿ ಅಥವಾ ಪರಿಷ್ಕರಣ ಮನವಿಗೆ ದಾಖಲು ಮಾಡುವ ಬಗ್ಗೆ ರಾಜ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು;

4) ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳಿಗೆ ಕ್ರಿಮಿನಲ್ ಮೊಕದ್ದಮೆಗಳನ್ನು ನ್ಯಾಯಾಲಯಗಳಿಂದ ಹಿಂತೆಗೆದುಕೊಳ್ಳುವ ವಿಚಾರದಲ್ಲಿ ಸಲಹೆ ನೀಡುವುದು, ಘನ ಸರ್ಕಾರದ ಆದೇಶದ ಮೇರೆಗೆ ನ್ಯಾಯಾಲಯಗಳಿಂದ ಕ್ರಿಮಿನಲ್ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳುವುದು.

ಈ ವರ್ಷದಲ್ಲಿ ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ದಾಖಲಾದ ಹಾಗೂ ವಿಲೇವಾರಿಯಾದ ಕ್ರಿಮಿನಲ್ ಮೊಕದ್ದಮೆಗಳ ಅಂಕಿ ಅಂಶಗಳನ್ನು ಕೆಳಕಂಡಂತೆ ಕೊಡಲಾಗಿದೆ.

| | | |
|---|---|---|
| 1) | ದಿನಾಂಕ 01-04-94ರಿಂದ 31-12-94ರ ಅವಧಿಯಲ್ಲಿ ವಿಲೇವಾರಿಯಾದ ಕ್ರಿಮಿನಲ್ ಮೊಕದ್ದಮೆಗಳ ಸಂಖ್ಯೆ | -1,75,317 |
| 2) | ದಿನಾಂಕ 01-04-94ರಿಂದ 31-12-94ರ ಅವಧಿಯಲ್ಲಿ ದೋಷಮುಕ್ತಿಯಲ್ಲಿ ಕೊನೆಗೊಂಡ ಕ್ರಿಮಿನಲ್ ಮೊಕದ್ದಮೆಗಳ ಒಟ್ಟು ಸಂಖ್ಯೆ | - 1,20,982 |

| | | |
|---|---|---|
| 3) ಈ ಇಲಾಖೆಯಲ್ಲಿ ದಿನಾಂಕ 01-04-94 ರಿಂದ 31-12-94ರ ವರೆಗೆ ವಿಮರ್ಶಿಸಲಾದ (ಪರಿಶೀಲಿಸಲಾದ) ಒಟ್ಟು ಕ್ರಿಮಿನಲ್ ಮೊಕದ್ದಮೆಗಳ ಸಂಖ್ಯೆ (ಅಂದರೆ ಬಿಡುಗಡೆಯಾದ ಮತ್ತು ಡಿಸ್‌ಚಾರ್ಜ್ ಆದ ಕ್ರಿಮಿನಲ್ ಮೊಕದ್ದಮೆಗಳು) | – | 54,335 |
| 4) ಮೇಲ್ಮನವಿ ಸಲ್ಲಿಸಲು ಶಿಫಾರಸ್ಸು ಮಾಡಲಾದ ಒಟ್ಟು ಕ್ರಿಮಿನಲ್ ಮೊಕದ್ದಮೆಗಳ ಸಂಖ್ಯೆ | – | 790 |
| 5) ಪರಿಷ್ಕರಣಕ್ಕೆ ಅರ್ಜಿ ಸಲ್ಲಿಸಲು ಶಿಫಾರಸ್ಸು ಮಾಡಲಾದ ಒಟ್ಟು ಕ್ರಿಮಿನಲ್ ಮೊಕದ್ದಮೆಗಳ ಸಂಖ್ಯೆ | – | 200 |
| 6) ಮೇಲ್ಮನವಿಗಾಗಲೀ ಅಥವಾ ಪರಿಷ್ಕರಣಕ್ಕಾಗಲೀ ಶಿಫಾರಸ್ಸು ಮಾಡಲಾಗದಿರುವ ಒಟ್ಟು ಕ್ರಿಮಿನಲ್ ಮೊಕದ್ದಮೆಗಳ ಸಂಖ್ಯೆ | – | 53,345 |
| 7) ಪೋಲೀಸ ಇಲಾಖೆಯ ತನಿಖಾಧಿಕಾರಿಗಳಿಗೆ ಮತ್ತು ಇತರೆ ಇಲಾಖೆಯ ಅಧಿಕಾರಿಗಳಿಗೆ ಅಭಿಯೋಜನೆ ಕುರಿತು ಒದಗಿಸಲಾದ ಅಭಿಪ್ರಾಯಗಳ ಒಟ್ಟು ಸಂಖ್ಯೆ | – | 285 |

ವರದಿಯ ವರ್ಷದಲ್ಲಿ ಒಟ್ಟು 1,75,317 ಕ್ರಿಮಿನಲ್ ಮೊಕದ್ದಮೆಗಳು ವಿಲೇವಾರಿಯಾಗಿದ್ದು, ಅವುಗಳ ಪೈಕಿ ಒಟ್ಟು 1,20,982 ಕ್ರಿಮಿನಲ್ ಮೊಕದ್ದಮೆಗಳು ದೋಷಮುಕ್ತಿಯಲ್ಲಿ ಕೊನೆಗೊಂಡಿರುತ್ತವೆ.

ಹಿಂದಿನ ವರ್ಷಗಳಲ್ಲಿದ್ದಂತೆ, ಈ ವರ್ಷವು ಸಹ ಈ ಇಲಾಖೆಯು ರಾಜ್ಯದ ಮುನ್ಸಿಫ್ ಹಾಗೂ ಮುನ್ಸಿಫ್ ಮ್ಯಾಜಿಸ್ಟ್ರೇಟರ ನ್ಯಾಯಾಲಯಗಳಲ್ಲಿ ಸರ್ಕಾರದ ಪರವಾಗಿ ಸಿವಿಲ್ ದಾವೆಗಳನ್ನು

ನಡೆಸುವ ಬಗ್ಗೆ ಸೂಕ್ತ ಏರ್ಪಾಟನ್ನು ಮಾಡಲಾಗಿದೆ. ಈ ಬಗ್ಗೆ ಸಂಬಂಧಪಟ್ಟ ಕಾನೂನು ಅಧಿಕಾರಿಗಳ ಕರ್ತವ್ಯ ನಿರ್ವಹಣೆಯು ಈ ನಿಟ್ಟಿನಲ್ಲಿ ಸಾಕಷ್ಟು ತೃಪ್ತಿಕರವಾಗಿದೆ ಎಂದು ಹೇಳಬಹುದು; ಸರ್ಕಾರಿ ಸಿವಿಲ್ ವ್ಯಾಜ್ಯಗಳ ಬಗ್ಗೆ ಈ ಇಲಾಖೆಯು ಈ ಕೆಳಕಂಡ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತದೆ.

1) ಯಾವ ನ್ಯಾಯಾಲಯದಲ್ಲಿ ಸರ್ಕಾರವನ್ನು ಒಂದು ಪಾರ್ಟಿ ಎಂದು ಮಾಡಲಾಗಿರುತ್ತದೆಯೋ ಅಂತಹ ನ್ಯಾಯಾಲಯದಲ್ಲಿ ಸರ್ಕಾರದ ಪರವಾಗಿ ಫೈಲ್ ಮಾಡಬೇಕಾಗಿರುವ ಲಿಖಿತ ಹೇಳಿಕೆಗಳನ್ನು ಪರಿಶೀಲಿಸುವುದು ಮತ್ತು ಅನುಮೋದಿಸುವುದು;

2) ಇಂತಹ ಮೊಕದ್ದಮೆಗಳನ್ನು ಪರಿಶೀಲಿಸಿ, ನ್ಯಾಯಾಸ್ಥಾನದಲ್ಲಿ ಸರ್ಕಾರದ ವತಿಯಿಂದ ಸಮರ್ಥನೆಗೆ ಸಹಿ ಮಾಡುವುದಕ್ಕಾಗಿ ಇಲಾಖೆಯು ಸಂಬಂಧಪಟ್ಟ ಅಧಿಕಾರಿಗಳಿಗೆ ಅಧಿಕಾರ (ಆಥರೈಸೇಶನ್)ವನ್ನು ನೀಡುವುದು;

3) ಮುನ್ಸಿಫ್ ನ್ಯಾಯಾಲಯಗಳ ತೀರ್ಪುಗಳು ಮತ್ತು ಆದೇಶಗಳನ್ನು ವಿಮರ್ಶಿಸುವುದು ಮತ್ತು ಅವುಗಳ ಬಗ್ಗೆ ಸಂಬಂಧಪಟ್ಟ ನ್ಯಾಯಾಲಯಗಳಲ್ಲಿ ಮೇಲ್ಮನವಿ ಅಥವಾ ಪರಿಷ್ಕರಣೆಗೆ ಅರ್ಜಿ ಸಲ್ಲಿಸಲು ಅರ್ಹವಾಗಿರುತ್ತದೆಯೋ ಅಥವಾ ಇಲ್ಲವೋ ಎಂಬ ಬಗ್ಗೆ ನಿರ್ಣಯ ತೆಗೆದುಕೊಳ್ಳುವುದು. ಮೇಲ್ಮನವಿ ಅಥವಾ ಪರಿಷ್ಕರಣೆಗೆ ಅರ್ಜಿ ಸಲ್ಲಿಸಲು ಈ ಇಲಾಖೆಯು ತೀರ್ಮಾನಪಟ್ಟಾಗ ಅಂತಹ ಸಂದರ್ಭಗಳಲ್ಲಿ ಮೊಕದ್ದಮೆಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಸಂಬಂಧಿಸಿದ ಸರ್ಕಾರಿ ವಕೀಲರು : ಅಧಿಕ ಸರ್ಕಾರಿ ವಕೀಲರಿಗೆ ಕಳುಹಿಸಿ ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದರ ಬಗ್ಗೆ ನಿರ್ದೇಶನಗಳನ್ನು ನೀಡುವುದು. ಅಲ್ಲದೆ, ಮೇಲ್ಮನವಿ ಅಥವಾ ಪರಿಷ್ಕರಣೆಗೆ ಶಿಫಾರಸ್ಸು ಮಾಡಿರಲಾರದಂತಹ ಸಂಬಂಧಪಟ್ಟ ಮೊಕದ್ದಮೆಗಳಲ್ಲಿ ಅಂತಿಮ ತೀರ್ಮಾನ ತೆಗೆದುಕೊಳ್ಳಲು ದಾಖಲಾತಿಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗುತ್ತದೆ.

RB
04139
COMMUNITY HEALTH CELL
LIBRARY AND DOCUMENTATION

4) ಸಿವಿಲ್ ನ್ಯಾಯಾಲಯಗಳಲ್ಲಿ ರಾಜ್ಯ ಸರ್ಕಾರದ ಪರವಾಗಿ ಮೊಕದ್ದಮೆಗಳನ್ನು ನಡೆಸಲಾಗಿದ್ದು, ಆ ನ್ಯಾಯಾಲಯಗಳಲ್ಲಿ ತೀರ್ಮಾನವಾದ ಸಿವಿಲ್ ಪ್ರಕರಣಗಳ ಅಂಕಿಅಂಶಗಳನ್ನು ಈ ಕೆಳಕಂಡಂತೆ ನೀಡಲಾಗಿದೆ.

ದಿನಾಂಕ 01–04–1994 ರಿಂದ 31–12–1994ರ ಅವಧಿಯಲ್ಲಿ ಮಾನ್ಯ ನ್ಯಾಯಾಲಯಗಳು ಹೊರಡಿಸಿದ ಸಿವಿಲ್ ಸೂಟ್‌ಗಳ ಮೇಲಿನ ತೀರ್ಪುಗಳು ಮತ್ತು ಆದೇಶಗಳನ್ನು ಕುರಿತಂತೆ ಪರಿಶೀಲಿಸಲಾದ ವಿವರಗಳು ಈ ಕೆಳಕಂಡಂತಿರುತ್ತದೆ.

| | |
|---|---|
| 1) ದಿನಾಂಕ 01–04–94ರಿಂದ 31–12–94ರ ವರೆಗೆ ಸಿವಿಲ್ ಪ್ರಕರಣಗಳಿಗೆ ಸಂಬಂಧಿಸಿದಂತೆ ತೀರ್ಪುಗಳು ಮತ್ತು ಆದೇಶಗಳನ್ನು ಕುರಿತು ಪರಿಶೀಲಿಸಲಾದ ಒಟ್ಟು ಮೊಕದ್ದಮೆಗಳ ಸಂಖ್ಯೆ. | –673 |
| 2) ಮೇಲ್ಮನವಿಗಾಗಿ ಶಿಫಾರಸ್ಸು ಮಾಡಲಾದ ಒಟ್ಟು ಪ್ರಕರಣಗಳ ಸಂಖ್ಯೆ | 71 |
| 3) ಪರಿಷ್ಕರಣಕ್ಕೆ ಅರ್ಜಿ ಸಲ್ಲಿಸಲು ಶಿಫಾರಸ್ಸು ಮಾಡಲಾದ ಒಟ್ಟು ಪ್ರಕರಣಗಳ ಸಂಖ್ಯೆ | 04 |
| 4) ಮೇಲ್ಮನವಿಗಾಗಲೀ ಅಥವಾ ಪರಿಷ್ಕರಣಕ್ಕಾಗಲೀ ಶಿಫಾರಸ್ಸು ಮಾಡಲಾಗದ ಪ್ರಕರಣಗಳ ಒಟ್ಟು ಸಂಖ್ಯೆ | – 38 |
| 5) ವಜಾ ಮಾಡಲಾದ ದಾವೆಗಳು (ಯಾವುದೇ ಕ್ರಮದ ಅವಶ್ಯಕತೆಯಿಲ್ಲವೆಂದು ಕಂಡು ಬಂದ ಪ್ರಕರಣಗಳು). | – 560 |

ವರದಿಯ ವರ್ಷದಲ್ಲಿ ವಿಲೇವಾರಿ ಮಾಡಲಾದ ಸಿವಿಲ್ ಮೊಕದ್ದಮೆಗಳ ಸಂಖ್ಯೆ 673 ಇದ್ದು ಇವುಗಳ ಪೈಕಿ ಸರ್ಕಾರದ ಪರವಾಗಿ ತೀರ್ಮಾನಗೊಂಡ ಪ್ರಕರಣಗಳ ಸಂಖ್ಯೆ 560 ಆಗಿರುತ್ತವೆ.

ವರದಿಯ ವರ್ಷದಲ್ಲಿ ಗ್ರೂಪ್ – ಎ ಅಧಿಕಾರಿ ವರ್ಗದಲ್ಲಿ ಎಂಟು ಮಂದಿಗೆ ವಿವಿಧ ತರಬೇತಿ ಸಂಸ್ಥೆಗಳಲ್ಲಿ ತರಬೇತಿಯನ್ನು ನೀಡಲಾಗಿರುತ್ತದೆ. ಇದಲ್ಲದೆ, ಗ್ರೂಪ್–ಬಿ ವೃಂದದಲ್ಲಿ ಒಬ್ಬ ಅಧಿಕಾರಿಗೆ ಬೆಂಗಳೂರಿನ ಜಿಲ್ಲಾ ತರಬೇತಿ ಕೇಂದ್ರದಲ್ಲಿ ತರಬೇತಿಯನ್ನು ನೀಡಲಾಗಿರುತ್ತದೆ. ಇದರ ಜೊತೆಗೆ, ಗ್ರೂಪ್–ಸಿ ವೃಂದದಲ್ಲಿ 17 ಮಂದಿಗೆ ರಾಜ್ಯದ ವಿವಿಧ ತರಬೇತಿ ಸಂಸ್ಥೆಗಳಲ್ಲಿ ದೈನಂದಿನ ಕಛೇರಿ ಕಾರ್ಯಕಲಾಪಗಳಲ್ಲಿ ಜ್ಞಾನವನ್ನು ವೃದ್ಧಿಪಡಿಸಿಕೊಳ್ಳಲು ತರಬೇತಿಯನ್ನು ನೀಡಲಾಗಿರುತ್ತದೆ.

ಈ ಇಲಾಖೆಯಲ್ಲಿ ಕನ್ನಡವನ್ನು ಅಧಿಕೃತ ಭಾಷೆಯನ್ನಾಗಿ ಎಲ್ಲಾ ಮಟ್ಟಗಳಲ್ಲಿಯೂ ಬಳಸಲಾಗುತ್ತಿದೆ. ಡಾ: ಸರೋಜಿನಿ ಮಹಿಷಿಯವರ ವರದಿಯನ್ನು ಜಾರಿಗೊಳಿಸುವ ಸಂಬಂಧದಲ್ಲಿ ಮತ್ತು ಕನ್ನಡವನ್ನು ಅಧಿಕೃತ ಭಾಷೆಯನ್ನಾಗಿ ಬಳಕೆ ಮಾಡುವ ಕುರಿತು ರಾಜ್ಯ, ವಿಭಾಗೀಯ ಮತ್ತು ಜಿಲ್ಲಾ ಮಟ್ಟಗಳಲ್ಲಿ ಸಮಿತಿಗಳನ್ನು ರಚಿಸಲಾಗಿರುತ್ತದೆ. ಸದರಿ ಸಮಿತಿಗಳು ನಿಯತಕಾಲಿಕ ತಪಾಸಣೆಗಳನ್ನು ನಡೆಸುತ್ತಿದ್ದು, ತಪಾಸಣೆ ವರದಿಗಳನ್ನು ಸರ್ಕಾರದ ಸಾಧ್ಯಂತಿ ಸುತ್ತೋಲೆಗನುಗುಣವಾಗಿ ಸರ್ಕಾರಕ್ಕೆ ಸಲ್ಲಿಸುತ್ತಿವೆ. ಕನ್ನಡವನ್ನು ಪರಿಣಾಮಕಾರಿಯಾಗಿ ಆಡಳಿತ ಭಾಷೆಯನ್ನಾಗಿ ಎಲ್ಲಾ ಹಂತಗಳಲ್ಲೂ ಬಳಕೆ ಮಾಡುವ ಸಂಬಂಧದಲ್ಲಿ ಈ ಇಲಾಖೆಯಿಂದಲೂ ಸಹ ಸುತ್ತೋಲೆಯೊಂದನ್ನು ಈ ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ ಕಳುಹಿಸಲಾಗಿರುತ್ತದೆ.

ಹರಿಜನ ಮತ್ತು ಗಿರಿಜನರ ಮೇಲಿನ ದೌರ್ಜನ್ಯಗಳ ಪ್ರಕರಣಗಳನ್ನು ನಡೆಸುವ ಸಂಬಂಧದಲ್ಲಿ ಘನ ಸರ್ಕಾರವು ಕ್ರಮವಾಗಿ ಕೋಲಾರ, ರಾಯಚೂರು ಬಿಜಾಪುರ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಿರುತ್ತದೆ. ಸದರಿ ನ್ಯಾಯಾಲಯಗಳಲ್ಲಿ ಹರಿಜನ ಮತ್ತು ಗಿರಿಜನರ (ದೌರ್ಜನ್ಯ) ತಡೆಗಟ್ಟುವ ಕಾಯಿದೆ, 1989ರ ಪ್ರಕಾರ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗುತ್ತದೆ. ಸದರಿ ವಿಶೇಷ ನ್ಯಾಯಾಲಯಗಳಲ್ಲಿ ಖಟ್ಲೆಗಳನ್ನು ನಡೆಸುವ ಸಂಬಂಧದಲ್ಲಿ ಸರ್ಕಾರವು ವಿಶೇಷ ಸರ್ಕಾರಿ ಅಭಿಯೋಜಕರನ್ನು ನೇಮಿಸಿರುತ್ತದೆ. ಮೇಲ್ಕಂಡ ಜಿಲ್ಲೆಗಳನ್ನು ಹೊರತುಪಡಿಸಿ, ಉಳಿದ ಜಿಲ್ಲಾ ಕೇಂದ್ರಗಳಲ್ಲಿರುವ ಸತ್ರ ನ್ಯಾಯಾಲಯಗಳನ್ನು ವಿಶೇಷ ನ್ಯಾಯಾಲಯಗಳೆಂದು ಪರಿಗಣಿಸಿರುವುದರಿಂದ ಸತ್ರ ನ್ಯಾಯಾಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸರ್ಕಾರಿ ಅಭಿಯೋಜಕರು (ಹೆಚ್ಚುವರಿ ನ್ಯಾಯಾಲಯಗಳನ್ನು ಬಿಟ್ಟು) ಮೇಲೆ ಪ್ರಸ್ತಾಪಿಸಲಾದ ಕಾಯಿದೆಯನುಸಾರವಾಗಿ ಪ್ರಕರಣಗಳನ್ನು ನಡೆಸಲು ಸರ್ಕಾರವು ಆದೇಶಿಸಿರುತ್ತದೆ.

ಪ್ರತಿಯೊಂದು ಜಿಲ್ಲಾ ಕೇಂದ್ರಗಳಲ್ಲಿ ಸಹಾಯಕ ಅಭಿಯೋಗ ನಿರ್ದೇಶಕರು ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು-ವ-ಸಹಾಯಕ ಸರ್ಕಾರಿ-ವಕೀಲರು ತಮ್ಮ ದೈನಂದಿನ ನ್ಯಾಯಾಲಯದ ಕರ್ತವ್ಯದ ಜೊತೆಗೆ ಕಾನೂನು ನೆರವು ಮಂಡಳಿಯ ಕಾರ್ಯದರ್ಶಿಗಳಾಗಿಯೂ ಕಾರ್ಯನಿರ್ವಹಣೆ ಮಾಡುತ್ತಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಉಚಿತ ಕಾನೂನು ನೆರವು ಶಿಬಿರಗಳನ್ನು ಏರ್ಪಡಿಸಿ,

ನಾಗರೀಕರಿಗೆ ಕಾನೂನಿನ ಪರಿಜ್ಞಾನ ನೀಡುವುದು ಮತ್ತು ನ್ಯಾಯಾಲಯಗಳಲ್ಲಿರುವ ಮೊಕದ್ದಮೆಗಳನ್ನು ಜನತಾ ನ್ಯಾಯಾಲಯಗಳ ಶಿಬಿರಗಳನ್ನು ಏರ್ಪಡಿಸಿ ರಾಜಿ ಮೂಲಕ ಇತ್ಯರ್ಥಗೊಳಿಸುವುದು ಇವರುಗಳ ಕಾರ್ಯವ್ಯಾಪ್ತಿಗೊಳಪಟ್ಟಿರುತ್ತದೆ. ಅಲ್ಲದೆ, ಈ ದಿಶೆಯಲ್ಲಿ ಅವರುಗಳು ಸದರಿ ಕಾನೂನಿನ ನೆರವು ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸಿಕೊಂಡು ಬಂದಿರುವುದು ಕಂಡುಬಂದಿದೆ.

ಇಲಾಖಾ ಮುಖ್ಯಾಧಿಕಾರಿಗಳ ಮತ್ತು ವಿಭಾಗೀಯ ಮಟ್ಟದ ಅಧಿಕಾರಿಗಳ ಪರಿಣಾಮಕಾರಿ ಮೇಲ್ವಿಚಾರಣೆ ಮತ್ತು ತಪಾಸಣೆ ಕಾರ್ಯಗಳನ್ನು ಕೈಗೊಂಡ ಪರಿಣಾಮವಾಗಿ, ಕ್ರಿಮಿನಲ್ ಮತ್ತು ಸಿವಿಲ್ ಪ್ರಕರಣಗಳನ್ನು ನಡೆಸುವ ಬಗ್ಗೆ ಈ ಇಲಾಖೆಯ ಅಭಿಯೋಜಕರ ಕಾರ್ಯದಕ್ಷತೆಯು ಹೆಚ್ಚಿರುತ್ತದೆ. ಕ್ರಿಮಿನಲ್ ಪ್ರಕರಣಗಳಲ್ಲಿ ದೋಷಸಿದ್ಧಿಯಲ್ಲಿ ಕೊನೆಗೊಂಡ ಪ್ರಕರಣಗಳ ಸಂಖ್ಯೆಯು ಹೆಚ್ಚಿರುತ್ತದೆ. ಇದೇ ರೀತಿ, ಸಿವಿಲ್ ಪ್ರಕರಣಗಳಲ್ಲಿಯೂ ಸಹ ಸರ್ಕಾರದ ಪರವಾಗಿ ಇತ್ಯರ್ಥವಾದ ದಾವೆಗಳ ಪ್ರಮಾಣವು ಹೆಚ್ಚಿರುತ್ತದೆ.

<u>ಬಜೆಟ್ (ಯೋಜನೇತರ ಬಾಬ್ತು):-</u>

(1) 1994-95ನೇ ಸಾಲಿಗೆ ಸಂಬಂಧಿಸಿದಂತೆ ಸರ್ಕಾರದಿಂದ ಮಂಜೂರು ಮಾಡಲಾದ ಬಜೆಟ್ -4,87,99,000-00

(2) ದಿನಾಂಕ 01-04-1994 ರಿಂದ 31-12-94ರವರೆಗೆ ಖರ್ಚಾದ ಮೊತ್ತ -3,68,57,358-00

## 5. ಕರ್ನಾಟಕ ಕಾನೂನು ನೆರವು ಮಂಡಳಿ

ಕರ್ನಾಟಕ ಕಾನೂನು ನೆರವು ಮಂಡಳಿಯನ್ನು ಕರ್ನಾಟಕ ಕಾನೂನು ನೆರವು ಮಂಡಳಿಯ ಅಧಿನಿಯಮ, 1981ರ ಅಡಿಯಲ್ಲಿ ರಚಿಸಲಾಗಿದೆ. ನ್ಯಾಯಾಲಯದ ಪ್ರಾಧಿಕಾರ ಮತ್ತು ಇತರ ನ್ಯಾಯಿಕ ಸಂಸ್ಥೆಗಳ ಮುಂದೆ ಬರುವ ಪ್ರಕರಣಗಳಲ್ಲಿ ಉಚಿತ ಕಾನೂನು ನೆರವು ನೀಡುವುದು, ಉಚಿತ ಕಾನೂನು ಸಲಹೆ, ಕಾನೂನು ಬಗ್ಗೆ ಜಾಗೃತಿ ಮತ್ತು ಅರಿವು ಮೂಡಿಸುವುದು, ಕಾನೂನು ವಿದ್ಯಾ ಪ್ರಸಾರ, ವ್ಯಾಜ್ಯಗಳನ್ನು ಸಮಾಧಾನಕರವಾಗಿ ನ್ಯಾಯಾಲಯಗಳ ಹೊರಗೆ ರಾಜಿ ಸಂಧಾನಗಳ ಮೂಲಕ ಇತ್ಯರ್ಥಗೊಳಿಸುವುದು ಮಂಡಳಿಯ ಕೆಲವು ಮುಖ್ಯ ಉದ್ದೇಶಗಳಾಗಿರುತ್ತವೆ.

ಮಂಡಳಿಯು ರಾಜ್ಯದಲ್ಲಿ 151 ಸಮಿತಿಗಳನ್ನು ರಚಿಸಿದೆ. ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲಾ ಕಾನೂನು ನೆರವು ಸಮಿತಿಗಳು, ನ್ಯಾಯಾಲಯಗಳು ಇರುವ ಕೆಲವು ತಾಲ್ಲೂಕುಗಳಲ್ಲಿ ತಾಲ್ಲೂಕು ಕಾನೂನು ನೆರವು ಸಮಿತಿಗಳು ಸ್ಥಾಪಿತವಾಗಿವೆ. ಹೊಸದಾಗಿ ನ್ಯಾಯಾಲಯಗಳನ್ನು ಸ್ಥಾಪಿಸಿರುವ ತಾಲ್ಲೂಕು ಕೇಂದ್ರಗಳಲ್ಲಿ ಕಾನೂನು ನೆರವು ಸಮಿತಿಗಳನ್ನು ರಚಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ವರ್ಷಕ್ಕೆ ರೂ.8,000—00 (ರೂಪಾಯಿ ಎಂಟು ಸಾವಿರ ಮಾತ್ರ) ಮೀರದ ಆದಾಯ ಹೊಂದಿರುವ ಕುಟುಂಬದ ಸದಸ್ಯರಿಗೆ ಉಚಿತ ಕಾನೂನು ನೆರವು ದೊರೆಯುತ್ತದೆ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ, ಸೈನಿಕರು ಮತ್ತು ಮಾಜಿ ಸೈನಿಕರು ಮತ್ತು ಅವರ ಕುಟುಂಬಗಳಿಗೆ ಕಾನೂನು ಸಲಹೆ ನೀಡಲು ಆದಾಯದ ಮಿತಿ ಇರುವುದಿಲ್ಲ. ಮೋಟಾರು ವಾಹನ ಅಪಘಾತದ ಕಾರಣ ಪರಿಹಾರ ಕೇಳುವ ಎಲ್ಲರಿಗೂ ಉಚಿತ ಕಾನೂನು ನೆರವು ದೊರೆಯುತ್ತದೆ.

ಮುಂದರಿಯು ದಿನಾಂಕ 01—04—94 ರಿಂದ 31—12—1994ರ ವರೆಗೆ ಸಾಧಿಸಿರುವ ಪ್ರಗತಿಯು ಈ ಕೆಳಕಂಡಂತಿದೆ.

## ಕಾನೂನು ನೆರವು:

ನ್ಯಾಯಾಲಯ ಹಾಗೂ ನ್ಯಾಯಾಧೀಕರಣಗಳ ಮುಂದೆ ಒಟ್ಟು 897 ವ್ಯಕ್ತಿಗಳಿಗೆ ಉಚಿತ ಕಾನೂನು ನೆರವು ನೀಡಲಾಗಿದೆ. 872 ಜನರಿಗೆ ಉಚಿತ ಕಾನೂನು ಸಲಹೆಯನ್ನು ನೀಡಲಾಗಿದೆ.

ಕಾನೂನು ನೆರವು ಶಿಬಿರಗಳು:

ಮಂಡಲಿಯು ಕಾರ್ಯಕ್ರಮಗಳನ್ನು ಪರಿಣಾಮ ಕಾರಿಯಾಗಿ ಜಾರಿಗೆ ತರಲು ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಕಾನೂನಿನ ಅರಿವನ್ನು ಮೂಡಿಸುವ ಸಲುವಾಗಿ ಕಾನೂನು ನೆರವು ಶಿಬಿರಗಳನ್ನು ಮತ್ತು ವಿಚಾರ ಸಂಕಿರ್ಣಗಳನ್ನು ಕಾನೂನು ನೆರವು ಸಮಿತಿಗಳು ಏರ್ಪಡಿಸಿದ್ದವು. ನ್ಯಾಯವಾದಿಗಳು ಗ್ರಾಮಗಳಿಗೆ ಹೋಗಿ ಗ್ರಾಮಸ್ಥರ ಸಮಸ್ಯೆಗಳ ಬಗ್ಗೆ ಉಚಿತ ಕಾನೂನು ಸಲಹೆಯನ್ನು ನೀಡುವುದಲ್ಲದೆ ಅವಶ್ಯಕ ಕಾನೂನುಗಳ ಮುಖ್ಯಾಂಶಗಳ ಬಗ್ಗೆ ತಿಳುವಳಿಕೆ ನೀಡಿದ್ದಾರೆ.

ವರದಿಯ ಸಾಲಿನಲ್ಲಿ 62 ಕಾನೂನು ನೆರವು ಶಿಬಿರಗಳನ್ನು ನಡೆಸಲಾಗಿದ್ದು 15,499 ಮಂದಿ ಅದರ ಪ್ರಯೋಜನ ಪಡೆದಿರುತ್ತಾರೆ.

ಕಾನೂನು ವಿದ್ಯಾ ಪ್ರಸಾರ:

ಕಾನೂನಿನ ಅರಿವು ಮೂಡಿಸುವ ಸಲುವಾಗಿ ಕಾನೂನು ಸಮಿತಿಗಳು ಕಾನೂನು ವಿದ್ಯಾ ಪ್ರಸಾರ ಸಂಕಿರ್ಣಗಳನ್ನು ಏರ್ಪಡಿಸುವುದಲ್ಲದೆ ಕಾನೂನು ಕಾಲೇಜಿನ ವಿದ್ಯಾರ್ಥಿಗಳ ಸಹಯೋಗದಿಂದಲೂ ಸಹ ಕಾನೂನು ವಿದ್ಯಾ ಪ್ರಸಾರ ಶಿಬಿರಗಳನ್ನು ಏರ್ಪಡಿಸಲಾಗಿದ್ದಿತು.

ಮಂಡಲಿಯು ಸೂಚನೆ ಮತ್ತು ಮಾರ್ಗದರ್ಶನ ಮೇರೆಗೆ ವಿಶ್ವೇಶ್ವರಪುರ ಲಾ ಕಾಲೇಜಿನ ವಿದ್ಯಾರ್ಥಿಗಳು ಲೋಕ ಅದಾಲತ್ ಮತ್ತು ಗ್ರಾಹಕರ ಹಕ್ಕು ನಿವಾರ ಸಂಕೀರ್ಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು. ಅದೂ ಅಲ್ಲದೆ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಯವರು ಮಂಡಲಿಯ ಅನುದಾನ ಪಡೆದು ಲೀಗಲ್ ಕ್ಲಿನಿಕಗಳನ್ನು ತಮ್ಮ ಕಾಲೇಜಿನಲ್ಲಿಯೂ ಮತ್ತು ಇತರೇ ಗ್ರಾಮಾಂತರ ಸ್ಥಳಗಳಲ್ಲಿ ಕಾನೂನು ವಿದ್ಯಾ ಪ್ರಸಾರ ಯೋಜನೆಯನ್ನು ಬಹಳ ಯಶಸ್ವಿಯಾಗಿ ನಡೆಸುತ್ತಾರೆ. ಕಾನೂನು ವಿದ್ಯಾ ಪ್ರಸಾರದ ಮೂಲಕ 24 ಉಪನ್ಯಾಸ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು 2067 ಜನರು ಪ್ರಯೋಜನ ಪಡೆದಿರುತ್ತಾರೆ. ಈ ಯೋಜನೆಯಡಿಯಲ್ಲಿ ಆಕಾಶವಾಣಿ ಮೂಲಕ 8 ಕಾರ್ಯಕ್ರಮಗಳನ್ನು ನಡೆಸಲಾಗಿದೆ. ಕಾನೂನು ವಿದ್ಯಾ ಪ್ರಸಾರದಡಿಯಲ್ಲಿ ಬೆಂಗಳೂರಿನ 7 ಮಹಿಳಾ ಕಾಲೇಜುಗಳಲ್ಲಿ ಪ್ರತಿ ಕಾಲೇಜಿನಲ್ಲಿ 3 ಉಪನ್ಯಾಸದಂತೆ "ಮಹಿಳೆ ಮತ್ತು ಕಾನೂನು" ಎಂಬ ವಿಷಯದ ಬಗ್ಗೆ ಉಪನ್ಯಾಸಗಳನ್ನು ವಿದ್ಯಾರ್ಥಿನಿಯರಿಗೆ ನೀಡಲಾಗಿದೆ.

## ಜನತಾ ನ್ಯಾಯಾಲಯ (ಲೋಕ ಅದಾಲತ್):

ಈ ಅವಧಿಯಲ್ಲಿ ರಾಜ್ಯದಲ್ಲಿ ಒಟ್ಟು 157 ಜನತಾ ನ್ಯಾಯಾಲಯ ಶಿಬಿರಗಳನ್ನು ನಡೆಸಲಾಗಿದೆ. ಈ ಶಿಬಿರಗಳಲ್ಲಿ ಒಟ್ಟು 5,212 ಸಿವಿಲ್ ಕ್ರಿಮಿನಲ್ ಪ್ರಕರಣಗಳು ರಾಜಿ ಸಂಧಾನದಲ್ಲಿ ಮುಕ್ತಾಯವಾಗಿದೆ. ಮತ್ತು 2684 ಮೋಟಾರು ಅಪಘಾತ ಪ್ರಕರಣಗಳೂ ಇತ್ಯರ್ಥವಾಗಿ ಒಟ್ಟು ರೂ. 4,29,01,574-00ಗಳ ಪರಿಹಾರ ಧನವನ್ನು ಅರ್ಜಿದಾರರಿಗೆ ಕೊಡಿಸಲಾಗಿದೆ.

ಜನತಾ ನ್ಯಾಯಾಲಯಗಳಲ್ಲಿ ಕಾನೂನು ಕಾಲೇಜುಗಳ ವಿದ್ಯಾರ್ಥಿಗಳು ಸಹ ಭಾಗವಹಿಸುತ್ತಿದ್ದಾರೆ.

ಈ ಅವಧಿಯಲ್ಲಿ ರೂ.1,63,484-00 ಸಾಲದ ಮೊತ್ತವನ್ನೊಳಗೊಂಡ 11 ಬ್ಯಾಂಕ್ ಪ್ರಕರಣಗಳನ್ನು ಜನತಾ ನ್ಯಾಯಾಲಯ ಮೂಲಕ ಇತ್ಯರ್ಥಪಡಿಸಲಾಗಿದೆ.

## ಹಣ ಹಂಚಿಕೆ ಬಿಡುಗಡೆ:

1994-95ರ ಆಯವ್ಯಯದಲ್ಲಿ ಮಂಡಳಿಗೆ ಒದಗಿಸಿರುವ ಹಾಗೂ ವೆಚ್ಚದ ವಿವರಗಳನ್ನು ಈ ಕೆಳಗೆ ಕೊಟ್ಟಿದೆ:

| ಕ್ರಮ ಸಂಖ್ಯೆ | ವರ್ಷ | ಹಂಚಿಕೆ ಲಕ್ಷ ರೂ.ಗಳಲ್ಲಿ | ಖರ್ಚುಗಳು (ವಿವರ) |
|---|---|---|---|
| 1 | 1994-95 | 58.28 | 19,59,969-65 (ಅಕ್ಟೋಬರ 94ರ ವರೆಗೆ) |

<u>ವಾಣಿಜ್ಯ ವ್ಯವಹಾರಗಳ ಶಾಖೆ</u>: ಮುಖ್ಯ ಕಾರ್ಯವು ಈ ಕೆಳಕಂಡಂತಿದೆ:

ಅ) ಸರ್ವೋಚ್ಚ ನ್ಯಾಯಾಲಯವು ಸೇರಿದಂತೆ ರಾಜ್ಯದಲ್ಲಿನ ಮತ್ತು ರಾಜ್ಯದ ಹೊರಗಿರುವ ನ್ಯಾಯಾಲಯಗಳಲ್ಲಿ ಸರ್ಕಾರವು ಒಂದು ಪಕ್ಷವಾಗಿರುವ ಪ್ರಕರಣಗಳಲ್ಲಿ ವಾಣಿಜ್ಯ ವ್ಯವಹಾರ ಪ್ರಕರಣಗಳನ್ನು ನಡೆಸುವುದು.

ಆ) ಪ್ರಾಸಿಕ್ಯೂಷನ್‌ಗಳನ್ನು ಹಿಂದೆ ತೆಗೆದುಕೊಳ್ಳುವುದಕ್ಕೆ ಸಂಬಂಧಿಸಿದ ಮೊಕದ್ದಮೆಗಳಲ್ಲಿ ಮತ್ತು ನ್ಯಾಯಾಲಯದ ಮುಂದೆ ಬಾಕಿಯಿರುವ ಮೊಕದ್ದಮೆಗಳಲ್ಲಿ ಅಭಿಪ್ರಾಯವನ್ನು ಒದಗಿಸುವುದು.

ಇ) ರಾಜ್ಯದ ರಾಜ್ಯಪಾಲರಿಂದ ಅಥವಾ ಅವರ ಪರವಾಗಿ ನಿರ್ವಹಿಸಬೇಕಾಗಿರುವ ಕರಾರುಗಳು ಒಪ್ಪಂದಗಳು ಮತ್ತು ಇತರ ಪತ್ರಗಳ ಪ್ರಾರೂಪಣೆ ಮತ್ತು ಪರಿಶೀಲನೆ.

ಈ) ದಾವೆಗಳ ನೋಟೀಸುಗಳ ಪರಿಶೀಲನೆ, ಮತ್ತು

COMMUNITY HEALTH CELL
LIBRARY AND DOCUMENTATION UNIT
BANGALORE.

ಉ) ರಾಜ್ಯ ಸರ್ಕಾರದ ಪರವಾಗಿ ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ನಡೆಸುವ ವಿಶೇಷ ಸಲಹೆಗಾರರು ಸೇರಿದಂತೆ ಅಡ್ವೊಕೇಟ್ ಜನರಲ್ ಮತ್ತು ಇತರ ಕಾನೂನು ಅಧಿಕಾರಿಗಳಿಗೆ ಸಂಭಾವನೆಯ ಮಂಜೂರಾತಿ.

ಸರ್ಕಾರವು ರಾಜ್ಯದಲ್ಲಿ ಅತಿ ದೊಡ್ಡ ಕಕ್ಷಿಗಾರ, ಅದು ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳು ಮತ್ತು ಸೆಷನ್ ನ್ಯಾಯಾಲಯಗಳ ಮುಂದೆ ಕ್ರಿಮಿನಲ್ ಮೊಕದ್ದಮೆಗಳಲ್ಲಿ ಪ್ರಾಸಿಕ್ಯೂಷನ್ ನಡೆಸುವ ವ್ಯವಸ್ಥೆ ಮಾಡಬೇಕಾಗುತ್ತದೆ. ಸರ್ವೋಚ್ಚ ನ್ಯಾಯಾಲಯ, ರಾಜ್ಯದ ಉಚ್ಚ ನ್ಯಾಯಾಲಯ ಮತ್ತು ಕೆಳಗಿನ ನ್ಯಾಯಾಲಯಗಳಲ್ಲದೇ ರಾಜ್ಯದ ಹೊರಗಿರುವ ನ್ಯಾಯಾಲಯಗಳಲ್ಲೂ ಸಹ ಗಣನೀಯ ಪ್ರಮಾಣದಲ್ಲಿ ಸಿವಿಲ್ ವ್ಯಾಜ್ಯಗಳು ಇವೆ. ವ್ಯಾಜ್ಯ ವ್ಯವಹರಣಾ ಪ ಪ್ರಕರಣಗಳನ್ನು ನಡೆಸುವುದು ಕರ್ನಾಟಕ ಸರ್ಕಾರಿ ವ್ಯಾಜ್ಯ [illegible], 1985 ರಿಂದ ಬದ್ಧವಾಗಿದೆ. ಈ ಇಲಾಖೆಯು ಸಚಿವಾಲಯದ ಇಲಾಖೆಗಳ ಪರವಾಗಿ ಈ ಎಲ್ಲಾ ನ್ಯಾಯಾಲಯಗಳಲ್ಲೂ ರಾಜ್ಯ ಸರ್ಕಾರಕ್ಕೆ ಸಂಬಂಧಿಸಿದ ವ್ಯಾಜ್ಯ ವ್ಯವಹಾರ ಪ್ರಕರಣಗಳ ಮೇಲ್ವಿಚಾರಣೆಯನ್ನು ಮಾಡುತ್ತದೆ. ವ್ಯಾಜ್ಯ ವ್ಯವಹಾರ ಪ್ರಕರಣವನ್ನು ನಡೆಸುವುದಕ್ಕೆ ಸಂಬಂಧಿಸಿದಂತೆ ಏಳು ಶಾಖೆಗಳು ಇವೆ. ನಾಲ್ಕು ಶಾಖೆಗಳು ರಾಜ್ಯದೊಳಗಿನ ಮತ್ತು

ಹೊಂದಿರುವ ನ್ಯಾಯಾಲಯಗಳಲ್ಲಿನ ಸಿವಿಲ್ ಮತ್ತು ಕ್ರಿಮಿನಲ್ ವ್ಯಾಜ್ಯ ವ್ಯವಹರಣೆ ಪ್ರಕರಣಗಳನ್ನು ನೋಡಿಕೊಳ್ಳುತ್ತವೆ. ಎರಡು ಶಾಖೆಗಳು ಉಚ್ಚ ನ್ಯಾಯಾಲಯದಲ್ಲಿನ ಹಾಗೂ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ಎಲ್ಲಾ ರಿಟ್ ವ್ಯಾಜ್ಯಗಳನ್ನು ನೋಡಿಕೊಳ್ಳುತ್ತವೆ. ಮತ್ತು ಒಂದು ಶಾಖೆಯು ಸರ್ವೋಚ್ಚ ನ್ಯಾಯಾಲಯದಲ್ಲಿನ ವ್ಯಾಜ್ಯ ಪ್ರಕರಣಗಳನ್ನು ನೋಡಿಕೊಳ್ಳುತ್ತದೆ. ವರದಿಯ ವರ್ಷದಲ್ಲಿ ಮೂವರು ಅಡಿಷನಲ್ ಕಾರ್ಯದರ್ಶಿಗಳು ವ್ಯಾಜ್ಯಕ್ಕೆ ಸಂಬಂಧಿಸಿದ ವಿಷಯಗಳ ಪ್ರಭಾರದಲ್ಲಿ ಇದ್ದರು. ಮತ್ತು ಅವರಿಗೆ ಐವರು ಅಪರ ಸಾಲಿಸಿಟರ್‌ಗಳು ಮತ್ತು ನಾಲ್ಕು ಸಹಾಯಕ ಸಾಲಿಸಿಟರುಗಳು ನೆರವು ನೀಡುತ್ತಾರೆ.

ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ದಾವೆ ಅಥವಾ ರಿಟ್ ಅರ್ಜಿಯ ವಿಷಯವಾಗಿ ನೀಡಲಾದ ಎಲ್ಲಾ ನೋಟೀಸುಗಳನ್ನು ಸಾಲಿಸಿಟರ್ ಅವರು ಸ್ವೀಕರಿಸುತ್ತಾರೆ. ತದನಂತರ ಸಂಬಂಧಪಟ್ಟ ನ್ಯಾಯಾಲಯಗಳ ಮುಂದೆ ಹಾಜರಾಗಲು ಕಾನೂನು ಅಧಿಕಾರಿಗಳನ್ನು ಪ್ರಾಧಿಕೃತಗೊಳಿಸಲಾಗುತ್ತದೆ. ಅಂಥ ಪ್ರಾಧಿಕಾರವನ್ನು ನೀಡಿದ ಮೇಲೆ ವಾದಪತ್ರದಲ್ಲಿ ಅಥವಾ ರಿಟ್ ಅರ್ಜಿಯಲ್ಲಿ ಮಾಡಲಾದ ಆರೋಪದ ಬಗ್ಗೆ ಸಂಬಂಧಪಟ್ಟ ಇಲಾಖೆಯ ವರದಿಗಳನ್ನು ಪಡೆಯಲಾಗುತ್ತದೆ. ಮತ್ತು ಸಂದರ್ಭಾನುಸಾರ ಲಿಖಿತ ಹೇಳಿಕೆ ಅಥವಾ ಕಾಂಟರು ಅಫಿಡವಿಟ್ಟಿನ ಪ್ರಾರೂಪವಾಗಿ ಕಳುಹಿಸಲಾಗುತ್ತದೆ. ಲಿಖಿತ ಹೇಳಿಕೆಗಳು ಅಥವಾ ಕಾಂಟರು ಅಫಿಡವಿಟ್ಟುಗಳನ್ನು

ಕಾನೂನು ದೃಷ್ಟಿಯಿಂದ ಪರೀಕ್ಷಿಸಲಾಗುತ್ತದೆ. ಮತ್ತು ಅಪೀಲುಗಳನ್ನು ಅಗತ್ಯವಿದ್ದೆಡೆಯಲ್ಲೆಲ್ಲಾ ಇಲಾಖೆಯ ಅಧಿಕಾರಿಗಳು ಪರಿಷ್ಕರಿಸುತ್ತಾರೆ ಅಥವಾ ಪುನಃ ಪ್ರಾರಂಭಿಸುತ್ತಾರೆ. ಪ್ರತಿಯೊಂದು ಹಂತದಲ್ಲಿಯೂ ವ್ಯಾಜ್ಯ ವ್ಯವಹಾರದ ಪ್ರಕರಣಗಳ ಪ್ರಗತಿಯನ್ನು ಅತಿ ಎಚ್ಚರಿಕೆಯಿಂದ ಗಮನಿಸಲಾಗುತ್ತದೆ. ಸರ್ಕಾರದ ಪರವಾಗಿ ನ್ಯಾಯಾಲಯಗಳ ಮುಂದೆ ಹಾಜರಾಗುವ ಕಾನೂನು ಅಧಿಕಾರಿಗಳಿಗೆ ಆಗಾಗ್ಗೆ ಅಗತ್ಯವೆಂದು ಭಾವಿಸುವ ಸಲಹೆ ಸೂಚನೆಗಳನ್ನು ನೀಡಲಾಗುತ್ತದೆ. ಅತಿ ಪ್ರಮುಖ ಪ್ರಕರಣಗಳ ಸಂಬಂಧದಲ್ಲಿ ಕಾನೂನು ವ್ಯವಹಾರಗಳನ್ನು ಗಮನಿಸಲು ಇಲಾಖೆಯ ಅಧಿಕಾರಿಗಳು ನ್ಯಾಯಾಲಯದಲ್ಲಿ ಹಾಜರಾಗುತ್ತಾರೆ.

ಪ್ರಕರಣಗಳು ಅಂತಿಮವಾಗಿ ಇತ್ಯರ್ಥವಾದ ನಂತರ ಸಂಬಂಧಪಟ್ಟ ಕಾನೂನು ಅಧಿಕಾರಿಯು ಅಪೀಲು ಮಾಡಬೇಕೇ? ಬೇಡವೇ ಎಂಬ ವಿಷಯದಲ್ಲಿ ತನ್ನ ಅಭಿಪ್ರಾಯವನ್ನು ತಿಳಿಸಿ, ಇದರೊಂದಿಗೆ ತೀರ್ಪು, ಡಿಕ್ರಿಯ ಪ್ರಮಾಣಿತ ಪ್ರತಿಯನ್ನು ನೇರವಾಗಿ ಕಾನೂನು ಇಲಾಖೆಗೆ ಕಳುಹಿಸಬೇಕಾಗುತ್ತದೆ. ಅಪೀಲನ್ನು ಅಥವಾ ತೀರ್ಪಿನ ಪುನರ್ ಪರಿಶೀಲನೆಗಾಗಿ ಅರ್ಜಿಯನ್ನು ಸಲ್ಲಿಸಬೇಕೇ, ಬೇಡವೇ ಎಂಬ ವಿಷಯದಲ್ಲಿ ಇಲಾಖೆಯು ನಿರ್ಧಾರವನ್ನು ಕೈಗೊಳ್ಳುತ್ತದೆ.

ಸಿವಿಲ್ ಪ್ರಕ್ರಿಯಾ ಸಂಹಿತೆಯ 80ನೇ ಪ್ರಕರಣದ ಮೇರೆಗೆ ದಾವೆಯ ನೋಟೀಸುಗಳನ್ನು ಸ್ವೀಕರಿಸುವ ಇಲಾಖಾ ಮುಖ್ಯಸ್ಥರು, ಜಿಲ್ಲಾಧಿಕಾರಿಗಳು, ಇತರ ಅಧಿಕಾರಿಗಳು ಸಂಬಂಧಪಟ್ಟ ಅಧಿಕಾರಿಗಳಿಂದ ಪ್ಯಾರಾವಾರು ಷರಾಗಳನ್ನು ಪಡೆದು ಅವುಗಳನ್ನು ಸಚಿವಾಲಯದ ಸಂಬಂಧಪಟ್ಟ ಆಡಳಿತ ಇಲಾಖೆಗಳಿಗೆ ಕಳುಹಿಸಿ ಕೊಡುತ್ತಾರೆ. ಆಡಳಿತ ಇಲಾಖೆಗಳು ಅದನ್ನು ಪರಿಶೀಲಿಸಿ ತಮ್ಮ ಷರಾಗಳೊಂದಿಗೆ ಈ ಇಲಾಖೆಗೆ ಕಳುಹಿಸುತ್ತವೆ. ಈ ಇಲಾಖೆಯು ಕ್ಲೇಮನ್ನು ಕುರಿತು ಪ್ರತಿವಾದಿಸಬೇಕೇ, ಬೇಡವೇ ಎಂಬ ವಿಷಯದಲ್ಲಿ ತನ್ನ ಅಭಿಪ್ರಾಯ ನೀಡುತ್ತದೆ.

ಬಿಡುಗಡೆ (ಡಿಸ್‌ಚಾರ್ಜ್) ಅಥವಾ ಖುಲಾಸೆ ಮಾಡಿದ (ಅಕ್ವಿಟಲ್) ಕ್ರಿಮಿನಲ್ ಮೊಕದ್ದಮೆಗಳ ಬಗೆಗಿನ ಎಲ್ಲ ತೀರ್ಪುಗಳನ್ನು ಪ್ರಾಸಿಕ್ಯೂಷನ್ಸ್ ಮತ್ತು ಸರ್ಕಾರಿ ವ್ಯಾಜ್ಯ ವ್ಯವಹಾರ ಇಲಾಖೆಯ ನಿರ್ದೇಶಕರು ಪುನರಾವಲೋಕಿಸುತ್ತಾರೆ. ಮತ್ತು ಅಪೀಲು ಮಾಡಬೇಕೇ, ಬೇಡವೇ ಎಂಬ ವಿಷಯದಲ್ಲಿ ಸರ್ಕಾರಕ್ಕೆ ತಮ್ಮ ಶಿಫಾರಸ್ಸುಗಳನ್ನು ಸಂಬಂಧಪಟ್ಟ ದಾಖಲೆಗಳನ್ನು ಈ ಇಲಾಖೆಗೆ ಕಳುಹಿಸುತ್ತಾರೆ. ನಿರ್ದೇಶಕರಿಂದ ಬಂದ ಶಿಫಾರಸ್ಸುಗಳನ್ನು ಈ ಇಲಾಖೆಯು ಪರಿಶೀಲಿಸಿ ತೀರ್ಪನ್ನು ಪುನರಾವಲೋಕಿಸಿದ ನಂತರ ಅಪೀಲು ಮಾಡಬೇಕೇ, ಬೇಡವೇ, ಎಂಬ ವಿಷಯದಲ್ಲಿ ತೀರ್ಮಾನ ಕೈಗೊಳ್ಳುತ್ತದೆ.

ಇಲಾಖೆಯು ಜಾರಿಯಲ್ಲಿರುವ ನಿಯಮಗಳಿಗನು ಸಾರವಾಗಿ ವಕೀಲರ (ಕೌನ್ಸಿಲರ್‌ಗಳ) ಸಂಭಾವನೆಯ ಬಿಲ್ಲುಗಳನ್ನು ಪರಿಶೀಲಿಸಿ ಮಂಜೂರು ಮಾಡುತ್ತದೆ.

ಈ ವರ್ಷದಲ್ಲಿ ಸ್ವೀಕರಿಸಲಾದ 12,194 ರಿಟ್ ಅರ್ಜಿಗಳ ಪೈಕಿ 4,817 ಅರ್ಜಿಗಳನ್ನು ಈ ವರ್ಷದಲ್ಲಿ ಇತ್ಯರ್ಥಗೊಳಿಸಲಾಗಿದೆ. 7,377 ಅರ್ಜಿಗಳು ಇತ್ಯರ್ಥವಾಗಬೇಕಾಗಿದೆ. ಇದಲ್ಲದೆ 998 ಪ್ರಕರಣಗಳಲ್ಲಿ ಅಪೀಲುಗಳನ್ನು ದಾಖಲು ಮಾಡಲಾಗಿದೆ ಮತ್ತು 243 ನಿಂದನೆ ಪ್ರಕರಣಗಳ ಬಗ್ಗೆ ವ್ಯವಹರಿಸಲಾಗಿದೆ.

ಪರಿಶೀಲನೆಯಲ್ಲಿರುವ ವರ್ಷದಲ್ಲಿ 4,824 ಸಿವಿಲ್ ಮೊಕದ್ದಮೆಗಳ ಬಗ್ಗೆ ಕ್ರಮ ಕೈಗೊಳ್ಳಲಾಯಿತಲ್ಲದೆ 948 ಮೊಕದ್ದಮೆಗಳಲ್ಲಿ ಅಪೀಲು ಹೂಡಲಾಯಿತು. ಮತ್ತು 1,536 ಮೊಕದ್ದಮೆಗಳನ್ನು ಇತ್ಯರ್ಥಪಡಿಸಲಾಯಿತು. 3,288 ಸಿವಿಲ್ ಮೊಕದ್ದಮೆಗಳು ಬಾಕಿ ಉಳಿದಿವೆ. ಹಾಗೆಯೇ 7,032 ಕ್ರಿಮಿನಲ್ ಮೊಕದ್ದಮೆಗಳ ಬಗ್ಗೆ ಕ್ರಮಕೈಗೊಳ್ಳಲಾಗಿದ್ದು, 1,043 ಮೊಕದ್ದಮೆಗಳಲ್ಲಿ ಅಪೀಲು ಹೂಡಲಾಯಿತು. 2,520 ಮೊಕದ್ದಮೆಗಳನ್ನು ಇತ್ಯರ್ಥಪಡಿಸಲಾಯಿತು. 4,512 ಮೊಕದ್ದಮೆಗಳು ಇತ್ಯರ್ಥವಾಗದೆ ಬಾಕಿ ಉಳಿದಿವೆ.

ಪ್ರಾರೂಪಣಾ ಶಾಖೆ:—

ಪ್ರಾರೂಪಣಾ ಶಾಖೆಯು ಈ ಮುಂದಿನ ಕಾರ್ಯಗಳನ್ನು ನಿರ್ವಹಿಸುತ್ತದೆ.

(1) ಕಾನೂನು, ಸಂವಿಧಾನಾತ್ಮಕ ಮತ್ತು ಪ್ರಾರೂಪಣಾ ವಿಷಯಗಳಿಗೆ ಸಂಬಂಧಿಸಿದ ಎಲ್ಲಾ ವಿಧಾಯಿತ ಪ್ರಸ್ತಾವನೆಗಳನ್ನು ಪರಿಷ್ಕರಿಸುವುದು;

(2) ರಾಜ್ಯ ವಿಧಾನ ಮಂಡಲದ ಸದನಗಳಲ್ಲಿ ಮಂಡಿಸಲಾದ ಸರ್ಕಾರಿ ವಿಧೇಯಕಗಳು ಮತ್ತು ಅವುಗಳ ತಿದ್ದುಪಡಿಗಳ ಪ್ರಾರೂಪಣಾ ಕಾರ್ಯ, ವಿಧೇಯಕಗಳಿಗೆ ಸಂಬಂಧಿಸಿದಂತೆ ಮಂಡಿಸಿದ ಸರ್ಕಾರೇತರ ತಿದ್ದುಪಡಿಗಳ ಪರಿಷ್ಕರಣೆ, ಸರ್ಕಾರೇತರ ತಿದ್ದುಪಡಿಗಳ ಮೇಲೆ ಆಡಳಿತ ಇಲಾಖೆಗಳಿಗೆ ಸಲಹೆ ಮತ್ತು ನೆರವು ನೀಡುವುದು;

(3) ವಿಧೇಯಕಗಳ ಪರಿಷ್ಕರಣೆಯೂ ಸೇರಿದಂತೆ ವಿಧಾನ ಮಂಡಲದ ಸದನಗಳು ಮತ್ತು ಸಂಯುಕ್ತ ಆಯ್ಕೆ ಸಮಿತಿ ಇವುಗಳಿಗೆ ಅವುಗಳ ಮುಂದಿರುವ ವಿಧೇಯಕಗಳಿಗೆ ಸಂಬಂಧಪಟ್ಟಂತೆ ಎಲ್ಲ ಹಂತಗಳಲ್ಲಿ ಕಾನೂನು ನೆರವು ನೀಡುವುದು;

(4) ಅಧ್ಯಾದೇಶಗಳ ಪ್ರಾರೂಪಣಾ ಕಾರ್ಯ;

(5) ಸರ್ಕಾರದ ಆದೇಶಗಳು ಮತ್ತು ಅಧಿಸೂಚನೆಗಳ ಪರಿಷ್ಕರಣೆ;

(6) ಸಂವಿಧಾನದ ಮೇರೆಗೆ ಹೊರಡಿಸಿದ ಆದೇಶಗಳೂ ಸೇರಿದಂತೆ ಶಾಸನಾತ್ಮಕ ನಿಯಮಗಳು, ಆದೇಶಗಳು ಮತ್ತು ಅಧಿಸೂಚನೆಗಳ ಪರಿಷ್ಕರಣೆ;

(7) ಸಂವಿಧಾನದ 299(1)ನೇ ಅನುಚ್ಛೇದದ ಮೇರೆಗೆ ರಾಜ್ಯಪಾಲರ ಪರವಾಗಿ ಒಪ್ಪಂದಗಳು ಅಥವಾ ಕರಾರು ಗಳನ್ನು ಬರೆದುಕೊಡುವುದು.

01-04-1994ರಿಂದ 31-12-1994ರ ವರೆಗಿನ ಅವಧಿಯಲ್ಲಿ 26 ಅಧಿನಿಯಮಗಳನ್ನು ಅಧಿನಿಯಮಿಸಲಾಯಿತು. 06 ಅಧ್ಯಾದೇಶಗಳನ್ನು ಘೋಷಿಸಲಾಯಿತು. 1328 ಶಾಸನಾತ್ಮಕ ನಿಯಮಗಳು, ಆದೇಶಗಳು ಮತ್ತು ಅಧಿಸೂಚನೆಗಳನ್ನು ಪರಿಷ್ಕರಿಸಲಾಯಿತು.

ಕ್ರೋಡೀಕರಣ ವಿಭಾಗ:-

ಕ್ರೋಡೀಕರಣ ವಿಭಾಗವು ಸಚಿವಾಲಯದ ವಿವಿಧ ಇಲಾಖೆಗಳಿಗೆ ಕಾನೂನು ಇಲಾಖೆಯು ನೀಡಿರುವ ಅಭಿಪ್ರಾಯ ಗಳ ಸಂಗ್ರಹವನ್ನು ವರ್ಷಂಪ್ರತಿ ಸಿದ್ಧಪಡಿಸಿ, ಮುದ್ರಿಸಿ ಪುಸ್ತಕ ರೂಪದಲ್ಲಿ ಹೊರತರುವ ಮತ್ತು ರಾಜ್ಯದ ಎಲ್ಲಾ ಅಧಿನಿಯಮಗಳನ್ನು ಇತ್ತೀಚಿನ ತಿದ್ದುಪಡಿಗಳೊಂದಿಗೆ ಸಮಗ್ರ ಪ್ರತಿ (ಮಾಸ್ಟರ್ ಕಾಪಿ) ಗಳನ್ನಾಗಿ ತಯಾರಿಸುವ ಕಾರ್ಯ ನಿರ್ವಹಿಸುತ್ತದೆ.

1982, 1983, 1984 ಮತ್ತು 1985ನೇ ವರ್ಷಗಳ ಅಭಿಪ್ರಾಯ ಸಂಗ್ರಹಗಳ ಅಂತಿಮ ಸಪ್ತಾಹಿಕ ಮುದ್ರಣ (ಪ್ರೂಫ್ಸ್)ಗಳನ್ನು ಪುಸ್ತಕವಾಗಿ ಮುದ್ರಿಸಲು ಸರ್ಕಾರೀ ಮುದ್ರಣಾಲಯಕ್ಕೆ ಕಳುಹಿಸಲಾಗಿದೆ. 1986ನೇ ವಾರ್ಷಿಕ ಸಂಚಿಕೆ ಸಿದ್ಧಪಡಿಸುವ ಕಾರ್ಯ ಪ್ರಗತಿಯಲ್ಲಿದೆ.

ರಾಜ್ಯಗಳ ಪುನರ್ ವಿಂಗಡಣೆಯಾಗುವ ಮುನ್ನ 1850 ರಿಂದ 1956ನೇ ಸಾಲಿನವರೆಗೆ ಮೈಸೂರು ರಾಜ್ಯದಲ್ಲಿ ಅಧಿನಿಯಮಿತವಾದ ಎಲ್ಲಾ ಅಧಿನಿಯಮಗಳನ್ನು 4 ಸಂಹಿತೆ ಸಂಪುಟಗಳಲ್ಲಿ (ಕೋಡ್‌ವಾಲ್ಯೂಂ) ಪ್ರಕಟಿಸಲಾಗಿದ್ದು 1956ರಲ್ಲಿ ಕರ್ನಾಟಕ ರಾಜ್ಯ ಅಸ್ತಿತ್ವಕ್ಕೆ ಬಂದ ಮೇಲೆ 1957ರಿಂದ 1960ನೇ ಇಸವಿಯವರೆಗೆ ಅಧಿನಿಯಮಗಳ ಸಂಹಿತೆ ಸಂಪುಟ ದಿನಾಂಕ 01-11-1969ಕ್ಕೆ ಪರಿಷ್ಕರಿಸಿದಂತೆ ಪ್ರಕಟಿಸಲಾಗಿದೆ.

ಈಗ 1961ನೇ ಸಾಲಿನಲ್ಲಿ ಅಧಿನಿಯಮಿತವಾದ ಅಧಿನಿಯಮಗಳ ಸಂಹಿತೆ ಸಂಪುಟ ಕಾರ್ಯ ಮುಗಿದಿದ್ದು ಮುದ್ರಣಾಲಯಕ್ಕೆ ಕಳುಹಿಸುವ ಹಂತದಲ್ಲಿದೆ ಮತ್ತು 1962ನೇ ಸಾಲಿನ ಸಂಹಿತೆ ಸಂಪುಟ ಕಾರ್ಯ ಪ್ರಗತಿಯಲ್ಲಿದೆ.

**ಪ್ರಕಟಣಾ ಶಾಖೆ:**

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಯ ಪ್ರಕಟಣಾ ಶಾಖೆಯ ಕೆಲಸ ಕಾರ್ಯಗಳು ಸಚಿವಾಲಯದ ಇತರೇ ಶಾಖೆಯ ಕೆಲಸ ಕಾರ್ಯಗಳಂತೆ

ಇರುವುದಿಲ್ಲ. ಈ ಶಾಖೆಯ ಪ್ರಮುಖ ಕೆಲಸವೇನೆಂದರೆ, ಪುಸ್ತಕ ರೂಪದಲ್ಲಿ ಮುದ್ರಿಸುವುದಕ್ಕಾಗಿ ರಾಜ್ಯ ವಿಧಾನ ಮಂಡಲದಿಂದ ಅಂಗೀಕರಿಸಲಾದ ರಾಜ್ಯ ಅಧಿನಿಯಮಗಳ ವಾರ್ಷಿಕ ಸಂಪುಟದ ಮತ್ತು ರಾಜ್ಯಪಾಲರಿಂದ ಹೊರಡಿಸಲಾದ ಅಧ್ಯಾದೇಶಗಳ ಇಂದಿನವರೆಗಿನ ಪ್ರತಿಗಳನ್ನು ಮತ್ತು ಭಾರತ ಸರ್ಕಾರದಿಂದ ಸರ್ಕಾರೀ ರಾಜ್ಯ ಪತ್ರದಲ್ಲಿ ಹೊರಡಿಸಲಾದ ಕೇಂದ್ರ ಅಧಿನಿಯಮಗಳು, ಅಧ್ಯಾದೇಶಗಳು, ವಿನಿಮಯಗಳು, ನಿಯಮಗಳು, ಸಮಸ್ತ ರಾಜ್ಯ ಸರ್ಕಾರಕ್ಕೆ ಸಂಬಂಧಿಸಿದ ಅಧಿಸೂಚನೆಗಳ ಪುನರ್ ಪ್ರಕಟಣೆಯನ್ನು ಸಹ ಈ ಶಾಖೆ ನಿರ್ವಹಿಸುತ್ತದೆ. ರಾಜ್ಯದ ವಿವಿಧ ಇಲಾಖೆಗಳ ಉಪಯೋಗಕ್ಕಾಗಿ ಮತ್ತು ಸಾರ್ವಜನಿಕರಿಗೆ ಮಾರಾಟ ಮಾಡುವುದಕ್ಕಾಗಿ ಇತ್ತೀಚಿನವರೆಗಿನ ತಿದ್ದುಪಡಿಗಳನ್ನು ಸೇರಿಸಿ ರಾಜ್ಯ ಅಧಿನಿಯಮಗಳನ್ನು ಅವುಗಳ ಅಡಿಯಲ್ಲಿ ಹೊರಡಿಸಲಾದ ನಿಯಮಗಳು ಮತ್ತು ಅಧಿಸೂಚನೆಗಳೊಂದಿಗೆ ಪುಸ್ತಕ ರೂಪದಲ್ಲಿ ಪ್ರಕಟಿಸಲಾಗಿದೆ. ಈ ವರ್ಷ 38 ಕೇಂದ್ರ ಅಧಿನಿಯಮಗಳನ್ನು ಮರು ಪ್ರಕಟಿಸಲಾಗಿದೆ.

ವರದಿಯ ವರ್ಷದಲ್ಲಿ ಈ ಕೆಳಕಂಡ ರಾಜ್ಯ ಅಧಿನಿಯಮ ಗಳನ್ನು ಮುದ್ರಿಸಲಾಗಿದೆ.

ದಿ ಕರ್ನಾಟಕ ಪೊಲೀಸ್ ಆಕ್ಟ್, 1963

ಈ ಕೆಳಗಿನ ವಾರ್ಷಿಕ ಸಂಚಿಕೆಗಳು ಮತ್ತು ಅಧಿನಿಯಮಗಳು ಮುದ್ರಣ ಹಂತದಲ್ಲಿರುತ್ತವೆ.

1) 1989ನೇ ಸಾಲಿನ ಅಧಿನಿಯಮ ಮತ್ತು ಅಧ್ಯಾದೇಶಗಳ ವಾರ್ಷಿಕ ವರದಿ.

2) 1990ನೇ ಸಾಲಿನ ಅಧಿನಿಯಮ ಮತ್ತು ಅಧ್ಯಾದೇಶಗಳ ವಾರ್ಷಿಕ ವರದಿ.

3) 1991ನೇ ಸಾಲಿನ ಅಧಿನಿಯಮ ಮತ್ತು ಅಧ್ಯಾದೇಶಗಳ ವಾರ್ಷಿಕ ವರದಿ.

4) 1992ನೇ ಸಾಲಿನ ಅಧಿನಿಯಮ ಮತ್ತು ಅಧ್ಯಾದೇಶಗಳ ವಾರ್ಷಿಕ ವರದಿ.

5) 1993ನೇ ಸಾಲಿನ ಅಧಿನಿಯಮ ಮತ್ತು ಅಧ್ಯಾದೇಶಗಳ ವಾರ್ಷಿಕ ವರದಿ.

6) ದಿ ಕರ್ನಾಟಕ ಮನಿ ಲೆಂಡರ್ಸ್ ಆಕ್ಟ್, 1961 ಅಂಡ್ ರೂಲ್ಸ್ 1965.

7) ದಿ ಕರ್ನಾಟಕ ಸಿವಿಲ್ ಕೋರ್ಟ್ ಆಕ್ಟ್, 1964.

8) ದಿ ಕರ್ನಾಟಕ ಸಿಲ್ಕ್ ವರ್ಮ್ ಸೀಡ್ ಅಂಡ್ ಕಕೂನ್ ರೆಗ್ಯುಲೇಶನ್ ಆಫ್ ಪ್ರೊಡಕ್ಷನ್ ಸಪ್ಲೈ ಅಂಡ್ ಡಿಸ್ಟ್ರಿಬ್ಯೂಶನ್ ಆಕ್ಟ್, 1959.

9) ದಿ ಕರ್ನಾಟಕ ಇನಾಮ್ಸ್ ಅಬಾಲಿಶನ್ ಆಕ್ಟ್, 1955.

10) 1994ನೇ ಸಾಲಿನ ಅಧಿನಿಯಮ ಮತ್ತು ಅಧ್ಯಾದೇಶಗಳ ವರದಿಯನ್ನು ಮುದ್ರಿಸಲು ಸಿದ್ಧಗೊಳಿಸಲಾಗುತ್ತಿದೆ.

ಅಭಿಪ್ರಾಯ ಶಾಖೆ:

ಈ ಇಲಾಖೆಯ ಅಭಿಪ್ರಾಯ ಶಾಖೆಯು ಈ ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸುತ್ತವೆ:

(1) ರಾಜ್ಯ ಸರ್ಕಾರದ ಸಚಿವಾಲಯದವಿವಿಧ ಇಲಾಖೆಗಳಿಗೆ ಸಂವಿಧಾನದ ಉಪಬಂಧಗಳು, ವಿವಿಧ ಶಾಸನಗಳು, ನಿಯಮಗಳು, ಆದೇಶಗಳು ಮುಂತಾದವುಗಳ ಅರ್ಥವಿವರಣೆಯೂ ಸೇರಿದಂತೆ ಕಾನೂನು ವಿಷಯಗಳ ಬಗ್ಗೆ ಸಲಹೆ ನೀಡುವುದು;

(2) ಈ ಇಲಾಖೆಯು ನೀಡುವ ಕಾನೂನು ಅಭಿಪ್ರಾಯಕ್ಕೆ ಅನುಸಾರವಾಗಿ (ಅಧೀನ ಶಾಸನ ರಚನೆಯನ್ನುಳಿದು) ಹೊರಡಿಸಬೇಕಾಗಿರುವ ಆದೇಶಗಳು, ನೋಟೀಸುಗಳು, ನಿಯಮಗಳು ಮುಂತಾದವುಗಳನ್ನು ಪ್ರಾರೂಪಿಸುವುದು ಮತ್ತು ಪರಿಷ್ಕರಿಸುವುದು;

(3) ಅಭಿಪ್ರಾಯ ಶಾಖೆಯು ಸರ್ಕಾರದಿಂದ ಅಥವಾ ಸರ್ಕಾರದ ಪರವಾಗಿ ಬರೆದುಕೊಡಬೇಕಾದ ಸ್ಥಿರಾಸ್ತಿಗಳಿಗೆ ಸಂಬಂಧಿಸಿದ ಲಿಖಿತ ಪತ್ರಗಳು, ಇತರ ಒಪ್ಪಂದಗಳು, ಕರಾರುಗಳು ಅಥವಾ ಲಿಖಿತ ಪತ್ರಗಳ ಪ್ರಾರೂಪಣಾ ಕಾರ್ಯವನ್ನು ಕೂಡ ನೋಡಿಕೊಳ್ಳುವುದು.

ಪ್ರಸಕ್ತ ವರ್ಷದಲ್ಲಿ (01–04–1994ರಿಂದ 31–12–1994 ಅವಧಿಯಲ್ಲಿ ಶಾಖೆಗೆ 663 ಕಡತಗಳು ಬಂದಿವೆ. 722 ಪ್ರಕರಣಗಳಿಗೆ ಕಾನೂನು ಸಲಹೆ ನೀಡಲಾಗಿದೆ.

01-01-1994ರಿಂದ 31-12-1994ರ

ಅವಧಿಯಲ್ಲಿ ರಾಜ್ಯದ ಅಧೀನ ನ್ಯಾಯಾಲಯಗಳಲ್ಲಿ ಹೂಡಲಾದ, ವಿಲೆ ಮಾಡಲಾದ ಮತ್ತು ಇತ್ಯರ್ಥವಾಗದೆ ಇರುವ ವಿವಿಧ ಬಗೆಯ ಮೊಕದ್ದಮೆಗಳ ಸಂಖ್ಯೆಯನ್ನು ಸೂಚಿಸಿರುವ ವಿವರಣೆ ಪಟ್ಟಿ।

## ಸಿವಿಲ್ ಮೊಕದ್ದಮೆಗಳು

1. ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಗಳು (ಬೆಂಗಳೂರಿನಲ್ಲಿರುವ ನಗರ ಸಿವಿಲ್ ನ್ಯಾಯಾಲಯವು ಒಳಗೊಂಡಂತೆ).

| ಕ್ರಮ ಸಂಖ್ಯೆ | ಮೊಕದ್ದಮೆಗಳ ವರ್ಗ | 01-01-04 ರಂದು ಇದ್ದಂತೆ | 01-01-94 ರಿಂದ 31-12-04 ರ ವರೆಗೆ ದಾಖಲಾಗಿರುವ ಪ್ರಕರಣಗಳ ಸಂಖ್ಯೆ | 01-01-94 ರಿಂದ 31-12-04 ರ ವರೆಗೆ ಇತ್ಯರ್ಥವಾದ ಪ್ರಕರಣಗಳ ಸಂಖ್ಯೆ | 31-12-1995 ರಂದು ಇದ್ದಂತೆ ಬಾಕಿ |
|---|---|---|---|---|---|
| 1 | 2 | 3 | 4 | 5 | 6 |
| 1. | ಮೂಲದಾವೆಗಳು | 35371 | 11301 | 9203 (3093) | 37649 |
| 2. | ಅಮಲ್ಜಾರಿ ಮೊಕದ್ದಮೆಗಳು | 7148 | 4457 | 3910 | 7695 |
| 3. | ಸಂಕೀರ್ಣ ಮೊಕದ್ದಮೆಗಳು (ಪಿ ಮತ್ತು ಎಸ್.ಸಿ. ಮತ್ತು ಡಬ್ಲ್ಯೂಸಿ, ಎಫ್.ಡಿ.ಪಿ. ಇತ್ಯಾದಿ) | 13939 | 3177 | 5395 | 16721 |

| 1 | 2 | | | | |
|---|---|---|---|---|---|
| 4. | ಮೋಟಾರು ವಾಹನಗಳ ಕ್ಲೇಮುಗಳ ಮೊಕದ್ದಮೆಗಳು | 81523 | 30523 | 20598 | 91448 |
| 5. | ದಿವಾಣಿ ಮೊಕದ್ದಮೆಗಳು | 258 | 56 | 77 | 237 |
| 6. | ವಾಡಿಕೆ ಸ್ವರೂಪದ ಅಪೀಲುಗಳು ಮತ್ತು ಅಮಲ್ಜಾರಿ ಅಪೀಲುಗಳು | 3888 | 831 | 790 | 3929 |
| 7. | ಸಂಕೀರ್ಣ ಅಪೀಲುಗಳು | 6012 | 2067 | 2580 | 5499 |
| 8. | ಮನೆ ಬಾಡಿಗೆ ನಿಯಂತ್ರಣ ಪರಿಷ್ಕರಣಾ ಮೊಕದ್ದಮೆ | 4575 | 1390 | 1586 | 4379 |
| 9. | ಭೂಮಿ ಅರ್ಜನಾ ಮೊಕದ್ದಮೆಗಳು | 1887 | 257 | 350 | 1794 |
| 10. | ಭೂಮಿ ಅರ್ಜನೆ ಅಪೀಲುಗಳು | 4111 | 493 | 1097 | 3507 |
| | | 158712 | 59552 | 45406 | 172858 |

ಸಿವಿಲ ನ್ಯಾಯಾಧೀಶರ ಮತ್ತು, ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟರ ಮತ್ತು, ಸಿವಿಲ ನ್ಯಾಯಾಧೀಶರ ಮತ್ತು, ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟರ ನ್ಯಾಯಾಲಯಗಳಲ್ಲಿ.

| ಕ್ರಮ ಸಂಖ್ಯೆ | ಮೊಕದ್ದಮೆಗಳ ವರ್ಗ | 01-01-94 ರಂದು ಇದ್ದಂತೆ | 01-01-94 ರಿಂದ 31-12-94 ರ ವರೆಗೆ ಹೂಡಿರುವ ಪ್ರಕರಣಗಳ ಸಂಖ್ಯೆ: | 01-01-94 ರಿಂದ 31-12-94 ರ ವರೆಗೆ ಇತ್ಯರ್ಥವಾದ ಪ್ರಕರಣಗಳ ಸಂಖ್ಯೆ: | 31-12-1994 ರಂದು ಇದ್ದಂತೆ ಬಾಕಿ |
|---|---|---|---|---|---|
| 1 | 2 | 3 | 4 | 5 | 6 |
| 1. | ಮೂಲ ದಾವೆಗಳು | 15,819 | 7,950 | 5·363 | 18,406 |
| 2. | ಲಘುವ್ಯಾಜ್ಯ ದಾವೆಗಳು | 30,068 | 39,561 | 24,709 | 44,920 |
| 3. | ಅಮಲ್ಜಾರಿ ಮೊಕದ್ದಮೆಗಳು | 33,013 | [illegible],983 | 18,622 | 45,374 |
| 4. | ಭೂ ಅರ್ಜನಾ ಮೊಕದ್ದಮೆಗಳು | 33,067 | 13,843 | 12,139 | 34,771 |
| 5. | ಸಂಕೀರ್ಣ ಮೊಕದ್ದಮೆಗಳು | 11,834 | 8,142 | 8,826 | 11,150 |

| 1 | 2 | 3 | 4 | 5 | 6 |
|---|---|---|---|---|---|
| 6. | ವಾಡಿಕೆ ಸ್ವರೂಪದ ಹಾಗೂ ಅವಲ್ಲಾಜ್ಜರಿ ಅಪೀಲುಗಳು | 14,844 | 4,575 | 4,330 | 15,089 |
| 7. | ಸಂಕೀರ್ಣ ಅಪೀಲುಗಳು | 2,892 | 2,126 | 2,244 | 2,774 |
| 8. | ಅಂತಿಮ ಡಿಕ್ರಿ ವ್ಯವಹಾರಗಳು | 1,189 | 607 | 612 | 1,184 |
| 9. | ಮನೆಬಾಡಿಗೆ ನಿಯಂತ್ರಣ ಮೊಕದ್ದಮೆಗಳು | 7,809 | 3,674 | 4,153 | 7,330 |
| | ಒಟ್ಟು | 1,50,535 | 1,11,461 | 80,998 | 1,80,998 |

3. ಮುನ್ಸೀಫ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟರ ನ್ಯಾಯಾಲಯಗಳು.

| ಕ್ರಮ ಸಂಖ್ಯೆ | ಮೊಕದ್ದಮೆಗಳ ವರ್ಗ | 01-01-94 ರಂದು ಇದ್ದಂತೆ ಬಾಕಿ | 01-01-94 ರಿಂದ 31-12-94 ರವರೆಗೆ ಹೂಡಿರುವ ಪ್ರಕರಣಗಳ ಸಂಖ್ಯೆ. | 01-01-94 ರಿಂದ 31-12-94 ರ ವರೆಗೆ ಇತ್ಯರ್ಥವಾದ ಪ್ರಕರಣಗಳ ಸಂಖ್ಯೆ. | 31-12-94 ರಂದು ಇದ್ದಂತೆ ಬಾಕಿ |
|---|---|---|---|---|---|
| 1 | 2 | 3 | 4 | 5 | 6 |
| 1. | ಮೂಲದಾವೆಗಳು | 1,06,867 | 46,000 | 48,497 | 1,04,370 |
| 2. | ಲಘುವ್ಯಾಜ್ಯ ದಾವೆಗಳು | 3,009 | 4,463 | 3,096 | 4,376 |
| 3. | ಅಮಲ್ಜಾರಿ ದಾವೆಗಳು | 42,445 | 14,225 | 11,428 | 45,242 |
| 4. | ಮನೆ ಬಾಡಿಗೆ ನಿಯಂತ್ರಣದ ಮೊಕದ್ದಮೆಗಳು | 3,254 | 864 | 1;113 | 3,005 |
| 5. | ಸಂಕೀರ್ಣ ಮೊಕದ್ದಮೆಗಳು | 4,449 | 5,251 | 4,604 | 5,096 |
| 6. | ಅಂತಿಮ ಡಿಕ್ರಿ ವ್ಯವಹರಣೆಗಳು | 2,907 | 1,432 | 1,564 | 2,775 |
| 7. | ಕೆ.ಎ.ಟಿ.ಆರ್. ಮೊಕದ್ದಮೆಗಳು | 14,873 | — | — | 14,873 |
| | ಒಟ್ಟು | 1,77,804 | 72,235 | 70,302 | 1,79,737 |

4· ಮುನ್ಸೀಫರ ನ್ಯಾಯಾಲಯಗಳು (ಸಿವಿಲ್)

| ಕ್ರಮ ಸಂಖ್ಯೆ | ಮೊಕದ್ದಮೆಗಳ ವರ್ಗ | 01–01–94 ರಂದು ಇದ್ದಂತೆ ಬಾಕಿ | 01–01–94 ರಿಂದ 31–12–94 ರ ವರೆಗೆ ಹೂಡಿರುವ ಪ್ರಕರಣಗಳ ಸಂಖ್ಯೆ | 01–01–94 ರಿಂದ 31–12–94 ರ ವರೆಗೆ ಇತ್ಯರ್ಥವಾದ ಪ್ರಕರಣಗಳ ಸಂಖ್ಯೆ | 31–12–1994 ರಂದು ಇದ್ದಂತೆ ಬಾಕಿ |
|---|---|---|---|---|---|
| 1 | 2 | 3 | 4 | 5 | 6 |
| 1· | ಮೂಲದಾವೆಗಳು | 50,614 | 13,962 | 23,820 | 40,756 |
| 2· | ಲಘು ವಾಣಿಜ್ಯ ದಾವೆಗಳು | 2,020 | 2,422 | 2,074 | 2,368 |
| 3· | ಅಮಲ್ಜಾರಿ ದಾವೆಗಳು | 21,796 | 7,317 | 9,241 | 19,872 |
| 4· | ಬಾಡಿಗೆ ನಿಯಂತ್ರಣದ ಮೊಕದ್ದಮೆಗಳು | 7,906 | 2,073 | 2,737 | 7,242 |
| 5· | ಸಂಕೀರ್ಣ ಮೊಕದ್ದಮೆಗಳು | 3,352 | 4,423 | 3,884 | 3,891 |
| 6· | ಅಂತಿಮ ಡಿಕ್ರಿ ವ್ಯವಹರಣೆಗಳು | 1,458 | 581 | 852 | 1,187 |
| 7· | ಕೆ·ಎ·ಡಿ·ಆರ್· ಮೊಕದ್ದಮೆಗಳು | — | — | — | — |
| | ಒಟ್ಟು | 87,146 | 30,778 | 42,608 | 75,316 |

## ಕ್ರಿಮಿನಲ್ ಮೊಕದ್ದಮೆಗಳು

ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಗಳು (ನಗರ ಸಿವಿಲ್ ನ್ಯಾಯಾಲಯ, ಬೆಂಗಳೂರು ಒಳಗೊಂಡಂತೆ)

| ಕ್ರಮ ಸಂಖ್ಯೆ | ಮೊಕದ್ದಮೆಗಳ ವರ್ಗ | 01-01-84 ರಂದು ಇದ್ದಂತೆ ಬಾಕಿ | 01-01-84 ರಿಂದ 31-12-84 ರ ವರೆಗೆ ಹೂಡಿರುವ ಪ್ರಕರಣಗಳ ಸಂಖ್ಯೆ | 01-01-84 ರಿಂದ 31-12-84 ರ ವರೆಗೆ ಇತ್ಯರ್ಥವಾದ ಪ್ರಕರಣಗಳ ಸಂಖ್ಯೆ | 31-12-84 ರಂದು ಇದ್ದಂತೆ ಬಾಕಿ |
|---|---|---|---|---|---|
| 1 | 2 | 3 | 4 | 5 | 6 |
| 1. | ಸೆಷನ್ಸ್ ಮೊಕದ್ದಮೆಗಳು | 7,526 | 3,854 | 3,256 | 8,124 |
| 2. | ಕ್ರಿಮಿನಲ್ ಮೊಕದ್ದಮೆಗಳು | 4,134 | 2,092 | 1,922 | 4,304 |
| 3. | ಕ್ರಿಮಿನಲ್ ಪುನರೀಕ್ಷಣಾ ಅರ್ಜಿಗಳು | 5,460 | 4,494 | 3,904 | 6,050 |
| 4. | ಕ್ರಿಮಿನಲ್ ವಿಶೇಷ ಮೊಕದ್ದಮೆಗಳು | 2,756 | 2,145 | 1,075 | 3,826 |
| 5. | ಕ್ರಿಮಿನಲ್ ಸಂಕೀರ್ಣ ಮೊಕದ್ದಮೆಗಳು | 1,026 | 12,187 | 9,450 | 3,743 |
| 6. | ಕ್ರಿಮಿನಲ್ ಸಂಕೀರ್ಣ ಅಪೀಲುಗಳು | 127 | 57 | 39 | 145 |
| | ಒಟ್ಟು | 21,029 | 24,809 | 19,646 | 26,192 |

2. ಮುಖ್ಯ ಮಹಾನಗರ ಮ್ಯಾಜಿಸ್ಟ್ರೇಟ ಮತ್ತು ಸಿವಿಲ ನ್ಯಾಯಾಧೀಶರ ಮತ್ತು ನ್ಯಾಯಿಕ ಮ್ಯಾಜಿಸ್ಟ್ರೇಟರ ನ್ಯಾಯಾಲಯಗಳು

| ಕ್ರಮ ಸಂಖ್ಯೆ | ಮೊಕದ್ದಮೆಗಳ ವರ್ಗ | 01-01-94 ರಂದು ಇದ್ದಂತೆ ಬಾಕಿ | 01-01-94 ರಿಂದ 31-12-94 ರ ವರೆಗೆ ದಾಖಲಾದ ಪ್ರಕರಣಗಳ ಸಂಖ್ಯೆ | 01-01-94 ರಿಂದ 31-12-94 ರ ವರೆಗೆ ಇತ್ಯರ್ಥವಾದ ಪ್ರಕರಣಗಳ ಸಂಖ್ಯೆ | 31-12-94 ರಂದು ಇದ್ದಂತೆ ಬಾಕಿ |
|---|---|---|---|---|---|
| 1 | 2 | 3 | 4 | 5 | 6 |
| 1. | ಭಾರತ ದಂಡ ಸಂಹಿತೆ ಮೊಕದ್ದಮೆಗಳು | 62,143 | 22,863 | 23,114 | 61,892 |
| 2. | ಕ್ರಿಮಿನಲ ಇತರ ಕಾನೂನುಗಳ ಮೊಕದ್ದಮೆಗಳು | 16,926 | 23,196 | 21,468 | 18,654 |
| 3. | ಬಾಲಾಪರಾಧ ಮೊಕದ್ದಮೆಗಳು | 629 | 568 | 511 | 736 |
| 4. | ಕ್ರಿಮಿನಲ ಸಂಕೀರ್ಣ ಮೊಕದ್ದಮೆಗಳು | 4,653 | 1,630 | 3,127 | 3,156 |
| | ಒಟ್ಟು | 84,401 | 48.257 | 48,220 | 84,438 |

COMMUNITY HEALTH CELL
LIBRARY AND DOCUMENTATION UNIT
BANGALORE.
RB N95
04139

3. ಸಿವಿಲ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟರ ನ್ಯಾಯಾಲಯಗಳು.

| ಕ್ರಮ ಸಂಖ್ಯೆ | ಮೊಕದ್ದಮೆಗಳ ವರ್ಗ | 01-01-84 ರಂದು ಇದ್ದಂತೆ ಬಾಕಿ | 01-01-84 ರಿಂದ 31-12-84 ರ ವರೆಗೆ ಹೂಡಿರುವ ಪ್ರಕರಣಗಳ ಸಂಖ್ಯೆ | 01-01-84 ರಿಂದ 31-12-84 ರ ವರೆಗೆ ಇತ್ಯರ್ಥವಾದ ಪ್ರಕರಣಗಳ ಸಂಖ್ಯೆ | 31-12-84 ರಂದು ಇದ್ದಂತೆ ಬಾಕಿ |
|---|---|---|---|---|---|
| 1 | 2 | 3 | 4 | 5 | 6 |
| 1. | ಭಾರತ ದಂಡ ಸಂಹಿತೆ ಮೊಕದ್ದಮೆಗಳು | 6,587 | 3,698 | 3,737 | 6,548 |
| 2. | ಕ್ರಿಮಿನಲ್ ಇತರ ಕಾನೂನುಗಳ ಮೊಕದ್ದಮೆಗಳು | 613 | 3,783 | 3,864 | 532 |
| 3. | ಬಾಲಾಪರಾಧ ಮೊಕದ್ದಮೆಗಳು | 48 | 91 | 59 | 80 |
| 4. | ಕ್ರಿಮಿನಲ್ ಸಂಕೀರ್ಣ ಮೊಕದ್ದಮೆಗಳು | 846 | 389 | 577 | 658 |
| | ಒಟ್ಟು | 8,094 | 7,961 | 8,237 | 7,818 |

4. ಮುನಿಸಿಫ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳು.

| ಕ್ರಮ ಸಂಖ್ಯೆ | ಮೊಕದ್ದಮೆಗಳ ವರ್ಗ | 01-01-94 ರಂದು ಇದ್ದಂತೆ ಬಾಕಿ | 01-01-94 ರಿಂದ 31-12-94 ರ ವರೆಗೆ ಹೂಡಿರುವ ಪ್ರಕರಣಗಳ ಸಂಖ್ಯೆ | 01-01-94 ರಿಂದ 31-12-94 ರ ವರೆಗೆ ಹೂಡಿರುವ ಪ್ರಕರಣಗಳ ಸಂಖ್ಯೆ | 31-12-94 ರಂದು ಇದ್ದಂತೆ ಬಾಕಿ |
|---|---|---|---|---|---|
| 1 | 2 | 3 | 4 | 5 | 6 |
| 1. | ಭಾರತ ದಂಡ ಸಂಹಿತೆ ಮೊಕದ್ದಮೆಗಳು | 76,141 | 62,753 | 48,764 | 90,130 |
| 2. | ಕ್ರಿಮಿನಲ್ ಇತರ ಕಾನೂನುಗಳ ಮೊಕದ್ದಮೆಗಳು | 38,585 | 1,00,912 | 95,093 | 44,404 |
| 3. | ಬಾಲಾಪರಾಧ ಮೊಕದ್ದಮೆಗಳು | 1 | — | 1 | — |
| 4. | ಕ್ರಿಮಿನಲ್ ಸಂಕೀರ್ಣ ಮೊಕದ್ದಮೆಗಳು | 15,886 | 18,160 | 16,294 | 17;752 |
| 5. | ಕ್ರಿಮಿನಲ್ ಸಂಕೀರ್ಣ ಅರ್ಜಿಗಳು | 153 | 710 | 283 | 580 |
| | ಒಟ್ಟು | 1,30,766 | 1,82,535 | 1,60,435 | 1,52,866 |

5. ಮಹಾನಗರ ಮ್ಯಾಜಿಸ್ಟ್ರೇಟ (ಸಂಚಾರಿ ನ್ಯಾಯಾಲಯಗಳು) ಮತ್ತು ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟರ ನ್ಯಾಯಾಲಯಗಳು.

| ಕ್ರಮ ಸಂಖ್ಯೆ | ಮೊಕದ್ದಮೆಗಳ ವರ್ಗ | 01-01-94 ರಂದು ಇದ್ದಂತೆ ಬಾಕಿ | 01-01-94 ರಿಂದ 31-12-94 ರ ವರೆಗೆ ಇತ್ಯರ್ಥವಾದ ಪ್ರಕರಣಗಳ ಸಂಖ್ಯೆ | 01-01-94 ರಿಂದ 31-12-94 ರ ವರೆಗೆ ಇತ್ಯರ್ಥವಾದ ಪ್ರಕರಣಗಳ ಸಂಖ್ಯೆ | 31-12-94 ರಂದು ಇದ್ದಂತೆ ಬಾಕಿ |
|---|---|---|---|---|---|
| 1 | 2 | 3 | 4 | 5 | 6 |
| 1. | ಭಾರತ ದಂಡ ಸಂಹಿತೆ ಮೊಕದ್ದಮೆಗಳು | 32,138 | 13,372 | 14,968 | 30,542 |
| 2. | ಕ್ರಿಮಿನಲ ಇತರ ಕಾನೂನುಗಳ ಮೊಕದ್ದಮೆಗಳು | 2,30,972 | 1,98;498 | 1,73,223 | 2,56,247 |
| 3. | ಕ್ರಿಮಿನಲ ಸಂಕೀರ್ಣ ಮೊಕದ್ದಮೆಗಳು | 9,447 | 6,078 | 6,829 | 8,696 |
| 4. | ಬಾಲಾಪರಾಧ ಮೊಕದ್ದಮೆಗಳು | 17 | – | 17 | – |
| 5. | ಕ್ರಿಮಿನಲ ಸಂಕೀರ್ಣ ಅಪೀಲುಗಳು | 132 | 105 | 62 | 175 |
| | ಒಟ್ಟು | 2,72,706 | 2,18,053 | 1,95,099 | 2,95,660 |

ಎಲ್ಲಾ ಅಧೀನ ನ್ಯಾಯಾಲಯಗಳ ಸಿವಿಲ್ ಮತ್ತು ಕ್ರಿಮಿನಲ್
ಮೊಕದ್ದಮೆಗಳ ಒಟ್ಟು ಸಂಖ್ಯೆ.

| ಕ್ರಮ ಸಂಖ್ಯೆ | ಮೊಕದ್ದಮೆಗಳ ವರ್ಗ | 01-01-94 ರಂದು ಇದ್ದಂತೆ ಬಾಕಿ | 01-01-94 ರಿಂದ 31-12-94 ರ ವರೆಗೆ ಹೂಡಿರುವ ಪ್ರಕರಣಗಳ ಸಂಖ್ಯೆ | 01-01-94 ರಿಂದ 31-12-94 ರ ವರೆಗೆ ಇತ್ಯರ್ಥವಾದ ಪ್ರಕರಣಗಳ ಸಂಖ್ಯೆ | 31-12-94 ರಂದು ಇದ್ದಂತೆ ಬಾಕಿ. |
|---|---|---|---|---|---|
| 1 | 2 | 3 | 4 | 5 | 6 |
| 1. | ಸಿವಿಲ್ | 5,74,197 | 2,74,026 | 2,39,314 | 6,08,909 |
| 2. | ಕ್ರಿಮಿನಲ್ | 5,16,996 | 4,81,615 | 4,31,637 | 5,66,974 |
| | ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳ ಒಟ್ಟು ಸಂಖ್ಯೆ: | 10,91,193 | 7,55,641 | 6,70,951 | 11,75,883 |

—o—